REPORT

# ಸಂಕಲ್ಪಗಳ ಸಮರಸ

## ಲಿಂಗಭೇದ ಮತ್ತು ಅಧಿಕಾರ

ಎನ್. ಶಾಂತಾ ಮೋಹನ್
ಆಶಾರಮೇಶ್
ಪಿಯೂಶ್ ಆಂಥೋನಿ

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು – ೫೬೦ ೦೧೨

# ಸಂಕಲ್ಪಗಳ ಸಮರಸ
## ಲಿಂಗಭೇದ ಮತ್ತು ಅಧಿಕಾರ

ಡಾ॥ ಎನ್. ಶಾಂತಾ ಮೋಹನ್
ಶ್ರೀಮತಿ. ಆಶಾ ರಮೇಶ್
ಶ್ರೀಮತಿ . ಪಿಯೂಶ್ ಆಂಥೋನಿ

**NIAS PUBLICATION R5-00**

ಲಿಂಗಭೇದ ಅಧ್ಯಯನ ಘಟಕ
**ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ**
ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು - 560 012

©ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
2000

ಪ್ರಕಾಶಕರು
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆ ಆವರಣ
ಬೆಂಗಳೂರು - 560 012

ದರ : ರೂ. 100/-

*ವರದಿ ಪ್ರತಿಗಾಗಿ ಸಂಪರ್ಕಿಸಿ:*
ಕಂಟ್ರೋಲರ್
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆ ಆವರಣ
ಬೆಂಗಳೂರು - 12
ದೂರವಾಣಿ: 080-3344351
ಇ-ಮೇಲ್: mgp@nias.iisc.ernet.in

ISBN 81-87663-12-X

ಮುದ್ರಕರು
ವರ್ಬಾ ನೆಟ್‌ವರ್ಕ್ ಸರ್ವೀಸ್
139, ಕೋಜಿ ಅಪಾರ್ಟ್‌ಮೆಂಟ್ಸ್, 8ನೇ ಮುಖ್ಯರಸ್ತೆ
12ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003
ದೂರವಾಣಿ : 3346692

## ಪರಿವಿಡಿ

I. ಕೃತಜ್ಞತೆಗಳು ........ 5

II. ಪೀಠಿಕೆ ........ 7

III. ಅಧ್ಯಯನದ ಆವಿಷ್ಕಾರದ ಸಾರಾಂಶ ........ 11

IV. ಪರಸ್ಪರ ಸಂವಾದ ಸಭೆ ........ 22

V. ಗುಂಪು ಚರ್ಚೆ ........ 31

VI. ಮುಕ್ತಾಯ ........ 38

## ಪುರವಣಿ

I. ಪತ್ರಿಕಾ ಪ್ರಕಟಣೆಗಳು ........ 39

II. ಭಾಗವಹಿಸಿದವರ ಪಟ್ಟಿ ........ 41

# ಆಭಾರ ಮನ್ನಣೆ

ಈ ಸಂಕಿರಣದಲ್ಲಿ ಪಾಲ್ಗೊಂಡು ಇದನ್ನು ಯಶಸ್ವಿಗೊಳಿಸಿದ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರಿಗೆ

ಈ ವಿಚಾರವಿನಿಮಯದಲ್ಲಿ ಆಸ್ಥೆ-ಆಸಕ್ತಿ-ಬದ್ಧತೆ-ಭರವಸೆಗಳನ್ನು ವ್ಯಕ್ತಪಡಿಸಿ- ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದರ ಮೂಲಕ ಲಾಭವನ್ನು ತಂದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಂ.ವೈ. ಘೋರ್ಪಡೆ ಅವರಿಗೆ -

ಕಾರ್ಯಕ್ರಮದಲ್ಲಿ ಅಪಾರ ಆಸಕ್ತಿವಹಿಸಿ ಪ್ರೋತ್ಸಾಹಿಸಿದ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (NIAS)ಯ ನಿರ್ದೇಶಕರಾದ ಪ್ರೊ. ರೊದ್ದಂ ನರಸಿಂಹ ಹಾಗೂ ಇತರ ಬೋಧಕ ವರ್ಗದವರಿಗೆ -

ಈ ಕಾರ್ಯಕ್ರಮದ ಆಯೋಜನೆಯಲ್ಲಿ ಒತ್ತಾಸೆ ನೀಡಿದ ನಿಯಂತ್ರಕ ಮೇಜರ್ ಜನರಲ್ ಎಂ. ಕೆ. ಪಾಲ್ ಮತ್ತು ಅವರ ಆಡಳಿತ ಸಿಬ್ಬಂದಿಗೆ.

ಈ ವರದಿಯನ್ನು ಕನ್ನಡಕ್ಕೆ ಅನುವಾದ ಮಾಡಿದ ಶ್ರೀ. ಬಿ. ಪಿ. ಮಲ್ಲಪ್ಪರವರಿಗೆ-

ಕ್ಷೇತ್ರ ಕೆಲಸಗಳಲ್ಲಿ ಹಾಗೂ ವರದಿಯನ್ನು ಪೂರ್ಣಗೊಳಿಸುವಲ್ಲಿ ದಣಿವಿಲ್ಲದೆ ದುಡಿದ ಘಟಕದ ಸಹೋದ್ಯೋಗಿಗಳಾದ ಡಾ|| ಬಿ.ಕೆ. ಅನಿತ, ಡಾ|| ಕೆ.ಜೆ. ಪರಮೇಶ್ವರಪ್ಪ, ಡಾ|| ಪಿ. ಪುಗಳೇಂದಿ, ಶ್ರೀಮತಿ ಎನ್. ಸುಧಾಮಣಿ, ಶ್ರೀ. ಎಚ್. ಆರ್. ರಾಜೇಂದ್ರ, ಶ್ರೀ.ಎಚ್. ವೇಣುಗೋಪಾಲ್, ಮತ್ತು ಶ್ರೀ ಪಿ.ಬಿ. ಮಹೇಶ್ ಕುಮಾರ್ ಅವರಿಗೆ -

ಕೊನೆಯದಾಗಿ ಈ ಯೋಜನೆಯಲ್ಲಿ ನಮಗೆ ನಿರಂತರವಾಗಿ ಸಹಕರಿಸಿದ ಫೋರ್ಡ್ ಫೌಂಡೇಶನ್‌ನ, ಅಧಿಕಾರ ಮತ್ತು ನಾಗರೀಕ ಸಂಸ್ಥೆಯ ಕಾರ್ಯಕ್ರಮ ಅಧಿಕಾರಿಗಳಾದ ಡಾ|| ಮಾರ್ಕ್ ರಾಬಿನ್‌ಸನ್ ಅವರಿಗೆ -

ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನಾ ತಂಡ
ಡಾ|| ಎಸ್. ಶಾಂತಾ ಮೋಹನ್
ಶ್ರೀಮತಿ. ಆಶಾ ರಮೇಶ್
ಶ್ರೀಮತಿ . ಪಿಯೂಶ್ ಆಂಥೋನಿ

ಮೇ 12. 2000
ಬೆಂಗಳೂರು

## ಪೀಠಿಕೆ

ಭಾರತದ ರಾಜಕೀಯ ವಿಕ್ಷೇಪ ಪಥದಲ್ಲಿ ಇತ್ತೀಚೆಗೆ ಕರ್ನಾಟಕದಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಗಳು ಅತ್ಯಂತ ಮಹತ್ವವನ್ನು ಪಡೆದಿವೆ. ಕಾರ್ಯಾರಂಭದ ಸಮಸ್ಯೆಗಳು-ಹೊಸ ಪ್ರಬುದ್ಧ ಮಾದರಿಯ ಸ್ಥಳೀಯ ಮಟ್ಟದ ನಾಯಕತ್ವ ಮತ್ತು ಅಧಿಕಾರವನ್ನು ನೀಡುವ ಭರವಸೆಯ ಸಂಧಿಕಾಲದಲ್ಲಿ ಈ ಚುನಾವಣೆಗಳು ನಡೆಯಲಿದ್ದವು. ವಿಕೇಂದ್ರೀಕರಣ ಮತ್ತು ರಾಜಕೀಯ ಅಧಿಕಾರದ ಪ್ರಕ್ರಿಯೆಗೆ ಒಲವು ತೋರಿಸುವವರೆಲ್ಲರಿಗೆ, ಮೂಲೆಗುಂಪಾಗಿದ್ದ ವರ್ಗದವರಲ್ಲಿ ಮಹಿಳೆಯರೂ ಸೇರಿದಂತೆ - ತಾವು ಎದುರುನೋಡುತ್ತಿದ್ದ ಅವಕಾಶ ದೊರೆತಂತೆ ಆಯಿತು.

ಫೆಬ್ರವರಿ 23 ಮತ್ತು 27 ರಂದು ನಡೆದ ಗ್ರಾಮ ಪಂಚಾಯತಿ ಚಟುವಟಿಕೆಗಳು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ (NIAS) ಲಿಂಗ ಭೇದ ಅಧ್ಯಯನ ಘಟಕ (GSU) ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಕೈಗೊಂಡಿದ್ದ ಸಂಶೋಧನೆ ಮತ್ತು ಕ್ರಿಯಾಯೋಜನೆಯ ಒಂದು ಭಾಗವಾಗಿ ದಾಖಲಿಸಲಾಯಿತು. ಈ ಅಧ್ಯಯನವನ್ನು ಎರಡು ಹಂತಗಳಲ್ಲಿ ನಡೆಸಲಾಯಿತು. ಚುನಾವಣಾ ಪೂರ್ವ ಪ್ರಕ್ರಿಯೆ ಮತ್ತು ಚುನಾವಣಾ ದಿನದ ಚಾಲನೆಗಳು.

ಈ ಸಂಶೋಧನಾ ಕಾರ್ಯದ ಒಳನೋಟಗಳನ್ನು ಹೆಚ್ಚು ಜನರೊಂದಿಗೆ ಹಂಚಿಕೊಳ್ಳುವ, ಆ ಮೂಲಕ ಹೊಸ ಸಂಚಲನೆಯನ್ನು ರೂಪಿಸುವ ದೃಷ್ಟಿಯಿಂದ "ಲಿಂಗಭೇದ ಮತ್ತು ಅಧಿಕಾರ " ವನ್ನು ಕುರಿತಾದ ಒಂದು ದಿನದ ವಿಚಾರ ಸಂಕಿರಣವನ್ನು 8.3.2000 ರಂದು ನಡೆಸಲಾಯಿತು. ಈ ವಿಚಾರ ಸಂಕಿರಣದಲ್ಲಿ ಪಂಚಾಯಿತಿ ಸದಸ್ಯರು. ಸರ್ಕಾರಿ ಅಧಿಕಾರಿಗಳು, ಅಧಿಕಾರ ವಿಕೇಂದ್ರೀಕರಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು, ಸಹಭಾಗಿ ಸಂಘಸಂಸ್ಥೆಗಳು, ಶಿಕ್ಷಣ ತಜ್ಞರು, ಸಮೂಹ ಮಾಧ್ಯಮವನ್ನೊಳಗೊಂಡ ಹಲವು ರಂಗಗಳ ಪ್ರತಿನಿಧಿಗಳನ್ನು ಒಂದೇ ವೇದಿಕೆಯ ಮೇಲೆ ತರುವ ಪ್ರಯತ್ನವು ಮಹತ್ವವಾದದ್ದು. ಕರ್ನಾಟಕದ ಐದು ಜಿಲ್ಲೆಗಳಿಂದ ಅರವತ್ತಕ್ಕೂ ಹೆಚ್ಚು ಚುನಾಯಿತ ಪ್ರತಿನಿಧಿಗಳು, ಸುಮಾರು ಇಪ್ಪತ್ತು ಸರ್ಕಾರೇತರ ಸಂಘ/ಸಂಸ್ಥೆ ಪ್ರತಿನಿಧಿಗಳು, ಮಾಧ್ಯಮ ಪ್ರತಿನಿಧಿಗಳು, ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಸರ್ಕಾರಿ ಅಧಿಕಾರಿಗಳು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯ ಶ್ರೀ ಎಂ. ವೈ. ಘೋರ್ಪಡೆಯವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಎರಡು ಗಂಟೆಗಳ ಕಾಲ ಸಚಿವರ ಹಾಗೂ ಸದಸ್ಯರ ನಡುವೆ ನಡೆದ ಸಂವಾದವು ಕಾರ್ಯನೀತಿ ಮತ್ತು ಪಂಚಾಯಿತಿ ಹಂತಗಳಲ್ಲಿ ಇಂತಹ ಸಂಶೋಧನೆ ಒಳಗೊಂಡಿರುವ ಸಾಮರ್ಥ್ಯವನ್ನು ದೃಢಪಡಿಸಿತು. ಮಾನ್ಯ ಸಚಿವರು ಲಿಂಗ ಭೇದ ಅಧ್ಯಯನ ಸಂಸ್ಥೆಗೆ ಎಲ್ಲಾ ರೀತಿಯ ಬೆಂಬಲವನ್ನು ನೀಡುವ ಭರವಸೆಯನ್ನು ವ್ಯಕ್ತಪಡಿಸುವುದರೊಂದಿಗೆ ಇನ್ನು ಮುಂದೆ ಪಂಚಾಯಿತಿ ಆಡಳಿತಕ್ಕೆ ಸಂಬಂಧಿಸಿದವರನ್ನು ಆಗಾಗ್ಗೆ ಸಂಧಿಸಿ ವಿಚಾರ ವಿನಿಮಯ ಮಾಡಲು ಒಪ್ಪಿಕೊಂಡದ್ದು ಈ ವಿಚಾರ ಸಂಕಿರಣದ ಮಹತ್ವದ ಫಲಶ್ರುತಿಯಾಗಿದೆ.

**ವಿಚಾರ ಸಂಕಿರಣದ ವಿವರಗಳನ್ನು ಒದಗಿಸುವುದೇ ಈ ಲೇಖನದ ಉದ್ದೇಶ.**

ವಿಚಾರ ಸಂಕಿರಣದ ಶಿಬಿರಾರ್ಥಿಗಳನ್ನು ಸ್ವಾಗತಿಸುತ್ತಾ, NIASನ ನಿರ್ದೇಶಕರಾದ ಪ್ರೊ. ಆರ್. ನರಸಿಂಹ ಅವರು ಈ ಕೂಟವನ್ನು ಸರ್ಕಾರೇತರ ಸಂಘ/ಸಂಸ್ಥೆಗಳು, ಸಂಶೋಧಕರು, ಮಾಧ್ಯಮ ಪ್ರತಿನಿಧಿಗಳು, ಅಧಿಕಾರಿವರ್ಗ, ಸಚಿವರು, ಎಲ್ಲಕ್ಕೂ ಮಿಗಿಲಾಗಿ ಹೊಸದಾಗಿ ಚುನಾಯಿತರಾದ ಸ್ಥಳೀಯ ಆಡಳಿತದ ಚುಕ್ಕಾಣಿಯನ್ನು ಹಿಡಿಯಲಿರುವ ಪಂಚಾಯಿತಿ ಸದಸ್ಯರು ಪಾಲ್ಗೊಂಡ ಈ ಕೂಟವನ್ನು ಹಿಂದೆಂದೂ ನಡೆಯದಿದ್ದ ಒಂದು ಐತಿಹಾಸಿಕ ಘಟನೆಯೆಂದು ಗುರುತಿಸಿ, ಈ ಸಭೆಯನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯೆಂದೇ ಏರ್ಪಡಿಸಿರುವುದು ಅರ್ಥಪೂರ್ಣವಾಗಿದೆ ಎಂದು ನುಡಿದರು.

ಸ್ವಾಗತ ಭಾಷಣಾನಂತರ ಮಾತನಾಡಿದ ಲಿಂಗಭೇದ ಅಧ್ಯಯನ ಘಟಕದ ಮುಖ್ಯಸ್ಥರಾದ ಡಾ|| ಶಾಂತಾ ಮೋಹನ್ ಅವರು ಪೀಠಿಕಾ ರೂಪದಲ್ಲಿ ವಿಚಾರ ಸಂಕಿರಣದ ಉದ್ದೇಶವನ್ನು, 'ಮಹಿಳೆ ಮತ್ತು ಅಧಿಕಾರ ವಿಕೇಂದ್ರಿಕರಣ' ವನ್ನು ಕುರಿತಾದ ಅಧ್ಯಯನದ ಗುರಿಯನ್ನು ವಿವರಿಸುತ್ತಾ- ಕೆಳಕಂಡ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಈ ಹಿಂದೆ ಘಟಕವು 'ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯ ಸ್ಥಾನಮಾನ' ಎಂಬ ವಿಷಯವಾಗಿ ನಡೆಸಿದ ಅಧ್ಯಯನವು ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮುಕ್ತ ಪ್ರವೇಶವನ್ನು ಒದಗಿಸಿದ್ದರೂ, ಈ ಕ್ಷೇತ್ರದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಲಿಲ್ಲ ಎಂಬುದನ್ನು ಪ್ರಚುರ ಪಡಿಸಿದೆ. ಆದ್ದರಿಂದ ಪ್ರಸಕ್ತ ಅಧ್ಯಯನವು ಆಯ್ದ ಮೂರು ಜಿಲ್ಲೆಗಳಲ್ಲಿನ (ಮೈಸೂರು, ಉಡುಪಿ ಮತ್ತು ಕೊಪ್ಪಳ) ಒಂಭತ್ತು ಪಂಚಾಯಿತಿಗಳನ್ನು ಗುರುತಿಸುವುದರ ಮೂಲಕ ಆರಂಭಿಕ ಅಧ್ಯಯನವನ್ನು ಕೈಗೊಂಡಿತು. ಈ ಅಧ್ಯಯನದ ಗುರಿ- ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಲು ಇರುವ ಅಡ್ಡಿ-ಆತಂಕಗಳನ್ನು ದಾಖಲಿಸುವುದು ಮಾತ್ರವಲ್ಲದೆ, ಸ್ಥಳೀಯ ಆಡಳಿತದಲ್ಲಿ ಸಕ್ರಿಯ ಪಾತ್ರವಹಿಸಲು ಪಂಚಾಯಿತಿಗಳನ್ನು ಉತ್ತೇಜಿಸುವ ಧ್ಯೇಯವನ್ನು ಹೊಂದಿದೆ. ಮಹಿಳಾ ಪಂಚಾಯಿತಿ ಸದಸ್ಯರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದರೆ ಸ್ಥಳೀಯ ರಾಜಕೀಯ ಚಿತ್ರವು ಲಿಂಗಾತೀತ ಆಡಳಿತವಾಗಿ ಬದಲಾಯಿಸುತ್ತದೆ. ಈಗ ನಮ್ಮ ಮುಂದಿರುವುದು ಈ ಸವಾಲು. ಮಹಿಳೆ ಜನಪರವಾದ ಸಮಾಜ ಪ್ರಿಯವಾದ ಮತ್ತು ಸಮುದಾಯಕ್ಕೆ ಆರೋಗ್ಯಕರವಾದ ಪರ್ಯಾಯ ರಾಜಕೀಯ ಪರಿಸರವನ್ನು ನಿರ್ಮಿಸಿ ಅಭಿವೃದ್ಧಿಗೊಳಿಸುವಳೆಂಬ ಭರವಸೆ ನಮಗಿದೆ.




ಮಾನ್ಯ ಮಂತ್ರಿಗಳಿಂದ ಪ್ರಾರಂಭಿಕ ಭಾಷಣ



ಅಧ್ಯಯನ ಮಂಡನೆಯ ಅಂಶಗಳನ್ನು ಗಮನವಿಟ್ಟು ಕೇಳುತ್ತಿರುವ ಸಭಿಕರು




ಅಧಿನಿಯಮ ಅನುಷ್ಠಾನ : ಕ್ಷೇತ್ರ ಅನುಭವ - ಆಶಾ ರಮೇಶ್




ಚುನಾವಣೆ : ಸ್ಥಳೀಯ ಚಾಲನೆಯ ಒಳನೋಟ - ಪಿಯೂಶ್ ಆಂತೋಣಿ

ಮಾನ್ಯ ಮಂತ್ರಿಗಳಾದ ಶ್ರೀ ಎಂ. ವೈ. ಘೋರ್ಪಡೆ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ - "ಅನೇಕ ಅಧ್ಯಯನಗಳು ಆಕರ್ಷಕವಾಗಿರಲು ಮತ್ತು ಓದಲು ರೋಚಕವಾಗಿರಲು ಕೇವಲ ನ್ಯೂನ್ಯತೆಗಳನ್ನು ಎತ್ತಿ ಹಿಡಿಯುವ ಪರಿಯಲ್ಲಿರುತ್ತವೆ. ಆದರೆ ಪ್ರಸ್ತುತ ನಮಗೆ ಮುಖ್ಯವಾಗಿ ಬೇಕಾಗಿರುವುದು ನ್ಯೂನ್ಯತೆಗಳನ್ನು ಎತ್ತಿ ಹಿಡಿಯುವುದರ ಜೊತೆಗೆ, ದೇಶದಲ್ಲಿ ಆಗುತ್ತಿರುವ ಬದಲಾವಣೆಗಳ ಸಮಗ್ರ ಅರಿವು. ಆದರಿಂದ ಈ ನ್ಯೂನ್ಯತೆಗಳನ್ನು ಯಥಾದೃಷ್ಟ ರೂಪದಲ್ಲಿ ವೀಕ್ಷಿಸಲು ಸಾಧ್ಯವಾಗುತ್ತದೆ." "ರಾಜಕೀಯ ಸಂಸ್ಥೆಯಲ್ಲದ N.I.A.S, ಸಾಮಾಜಿಕ ಗುರಿ ಸಾಧನೆಯಲ್ಲಿ ವಹಿಸುತ್ತಿರುವ ಪಾತ್ರ ಪ್ರಶಂಸನೀಯವಾದುದು. ಗ್ರಾಮ ಪಂಚಾಯಿತಿ ಚುನಾವಣೆಯ ಫಲಿತಾಂಶಗಳ ಪ್ರಕಟಣೆಯಾದ ಒಂದು ವಾರದಲ್ಲಿಯೇ ಈ ಸಭೆ ನಡೆಯುತ್ತಿರುವುದು ಅತ್ಯಂತ ಸೂಕ್ತವಾಗಿದೆ" ಎಂದು ಹೇಳಿದರು.

ಸ್ವಾತಂತ್ರ್ಯ ಬಂದಾಗಿಸಿಂದಲೂ ನನ್ನ ಕಾರ್ಯಕ್ಷೇತ್ರದ ಭಾಗ ಅಂದರೆ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಏನಾಗಿದೆಯೆಂಬ ಮೊದಲ ಮಾಹಿತಿ ನನಗಿದೆಯಾದ್ದರಿಂದ ನನಗಿರುವ ಅಲ್ಪ ಅನುಭವದ ಹಿನ್ನೆಲೆಯಲ್ಲಿ ನೀವು ಗಮನಿಸಿರುವ ಅಂಶಗಳ ಲಾಭವನ್ನು ಪಡೆದು, ಅಭಿವೃದ್ಧಿಯನ್ನು ಅರೆಬರೆಯಾಗದಂತೆ ಸಮಗ್ರವಾಗಿ ಕಲ್ಪಿಸಿಕೊಳ್ಳುವ ಅನುಕೂಲವನ್ನು ಪಡೆದಿದ್ದೇನೆ ಎಂದು ಹೇಳಿದ ಸಚಿವರು, ವಿವಾದಾತ್ಮಕವಾದ "ಶೌಚಾಲಯ ನಿಯಮ"ವನ್ನು ಪರಿಷ್ಕರಿಸುವುದರ ಅಗತ್ಯವನ್ನು ಒತ್ತಿ ಹೇಳಿದರು. ಗ್ರಾಮೀಣ ಅಭಿವೃದ್ಧಿ ಒಂದು ಸಾಮಾಜಿಕ ಚಳುವಳಿಯಾಗಬೇಕೇ ಹೊರತು, ಶೌಚಾಲಯದ ಸೌಲಭ್ಯವನ್ನು ಹೊಂದಿಲ್ಲದ ಸದಸ್ಯರು ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರೆಂಬ ನಿಯಮದ ಬೆದರಿಕೆ ಒಡ್ಡುವುದು ಸರಿಯಲ್ಲ. ಗ್ರಾಮೀಣ ನೈರ್ಮಲ್ಯವನ್ನು ಜನಪ್ರಿಯಗೊಳಿಸಲು ನೂರಾರು ಮಾರ್ಗಗಳಿವೆ. ಈ ನಿಯಮ ರಾಜಕೀಯವಾಗಿ ದುರುಪಯೋಗವಾಗುವ ಸಂಭವವಿದೆ ಎಂದು ಹೇಳಿದ ಸಚಿವರು ತಮ್ಮ ರಾಜಕೀಯ ಕಲ್ಪನೆಯನ್ನು ವಿಶದೀಕರಿಸಿ, ಗಾಂಧೀಜಿಯವರ ಪಂಚಸೂತ್ರಗಳ ಹಿನ್ನೆಲೆಯಲ್ಲಿ ದೀರ್ಘವಾಗಿ ವಿವರಿಸಿ, ಪರಿಣಾಮಕಾರಿಯಾಗಿ ಸ್ಥಳೀಯ ಆಡಳಿತಕ್ಕೆ ಈ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕೆಂದು ಒತ್ತಿ ಹೇಳಿದರು.

ವಿಚಾರ ಮಂಡನೆಗಳು ಹಾಗೂ ಭಾಷಣಗಳನ್ನು ಶ್ರೀಮತಿ ನಾಗಮಣಿ ಅವರು ಕನ್ನಡಕ್ಕೆ ಅನುವಾದ ಮಾಡಿದರು.

ಶ್ರೀಮತಿ ಆಶಾ ರಮೇಶ್ ಮತ್ತು ಶ್ರೀಮತಿ ಪಿಯೂಶ್ ಅಂಥೋನಿ ಅವರು ಅಧ್ಯಯನದಲ್ಲಿ ಕಂಡುಬಂದ ವಿಷಯಗಳನ್ನು ವಿವರಿಸಿದರು. ಮೊದಲ ಭಾಗದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಅನುಷ್ಠಾನ ಹಾಗೂ ಎರಡನೇ ಭಾಗದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ಸ್ಥಳೀಯ ಚಾಲನೆಯನ್ನು ಕುರಿತ ವಿವರಗಳಿವೆ.

## ಅಧ್ಯಯನದ ಆವಿಷ್ಕಾರದ ಸಾರಾಂಶ

ವ್ಯಕ್ತವಾದ ಕಾಳಜಿಗಳು: ಮಂಡನೆಗಳಲ್ಲಿನ ಮುಖ್ಯಾಂಶಗಳು - 'ಮಹಿಳೆ ಮತ್ತು ಆಡಳಿತ ವಿಕೇಂದ್ರೀಕರಣ'ದ ಅಧ್ಯಯನವು 1998 ರಲ್ಲಿ ಆಯ್ದ ಮೈಸೂರು, ಉಡುಪಿ ಮತ್ತು ಕೊಪ್ಪಳ

ಜಿಲ್ಲೆಗಳಲ್ಲಿನ ಪಂಚಾಯಿತಿಗಳನ್ನು ಗುರುತಿಸುವ ಮೂಲಕ ಆರಂಭವಾಯಿತು. ಪ್ರಾರಂಭಿಕ ಅಧ್ಯಯನದಲ್ಲಿ ಕಂಡು ಬಂದ ಪ್ರಮುಖ ಅಂಶಗಳು:

- ಮಹಿಳೆಯರಿಗೆ ರಾಜಕೀಯದ ಅನುಭವ ಹಾಗೂ ಇತರೆ ಪೂರ್ವ ಅಗತ್ಯಗಳು ಇಲ್ಲದಿದ್ದರೂ ಅವರ ವಿಮರ್ಶಾಪೂರ್ವ ಉಪಸ್ಥಿತಿಯೇ ಪಂಚಾಯಿತಿಗಳ ಕಾರ್ಯ ನಿರ್ವಹಣೆಯಲ್ಲಿ ಧನಾತ್ಮಕ ಅಂಶವಾಗಿದೆ.

- ವಿದ್ಯೆ ಮತ್ತು ಹಿಂದಿನ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿನ ಅನುಭವ ಮಹಿಳೆಯರಿಗೆ ಇನ್ನೂ ಉತ್ತಮ ಕಾರ್ಯನಿರ್ವಹಣೆ ಹಾಗೂ ಭಾಗವಹಿಸುವಿಕೆಯಲ್ಲಿ ಸಹಾಯವಾಗುತ್ತದೆ.

- ತರಬೇತಿ ಹಾಗೂ ಸರ್ಕಾರೇತರ ಸಂಸ್ಥೆಗಳ ಒತ್ತಾಸೆ, ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಉತ್ತಮ ರೀತಿಯಲ್ಲಿ ಭಾಗವಹಿಸಲು ಸಹಾಯಕವಾಗುತ್ತದೆ.

- ಚುನಾಯಿತ ಮಹಿಳಾ ಸದಸ್ಯರು, ಚುನಾವಣೆಗಳಲ್ಲಿ ಅವಿರೋಧವಾಗಿ ಆಯ್ಕೆಯಾದ ಸದಸ್ಯರಿಗಿಂತಲೂ ತಮ್ಮ ಮತದಾರರಿಗೆ ಹೆಚ್ಚು ಬದ್ಧರೂ, ಕ್ರಿಯಾಶಾಲಿಗಳೂ ಆಗಿರುವುದು ಕಂಡುಬಂದಿದೆ.

ಈ ಪ್ರಾಯೋಗಿಕ ಅಧ್ಯಯನವು ವ್ಯವಸ್ಥೆಯನ್ನು ಬದಲಾಯಿಸುವ ಮೂಲಕ ಒಂದು ಪರ್ಯಾಯ ರಾಜಕೀಯ ಸಂಸ್ಕೃತಿಯನ್ನು ನಿರ್ಮಾಣ ಮಾಡುವಲ್ಲಿ ಮಹಿಳಾ ಅಭ್ಯರ್ಥಿಗಳಲ್ಲಿ ಅಡಕವಾಗಿರುವ ಶಕ್ತಿಯನ್ನು ಪ್ರಕಾಶಪಡಿಸಿದೆ.

ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಗಳ ಮೂಲಕ, ರಾಜ್ಯವು ವರ್ಗಗಳ ಆಧಾರದ ಮೇಲೆ ಮಹಿಳೆಯರಿಗೆ ಸ್ಥಾನವನ್ನು ಮೀಸಲಿರಿಸುವ ಮೂರನೇ ಅವಧಿಯನ್ನು ಪ್ರವೇಶಿಸಿದೆ. ರಾಜಕೀಯ ಬದಲಾವಣೆಯಲ್ಲಿ ಮಹಿಳೆಯರ ಪ್ರವೇಶದ ಬೆಂಬಲಿಗರ ಹಾಗೂ ವಿಮರ್ಶಕರ ದೃಷ್ಟಿಯಲ್ಲೂ ಈ ಚುನಾವಣೆಯು ಅತ್ಯಂತ ಮಹತ್ವವನ್ನು ಪಡೆದಿದೆ. ಮೀಸಲಾತಿಯ ಸುದೀರ್ಘ ಇತಿಹಾಸದಲ್ಲಿ ಪ್ರಸಕ್ತ ಚನಾವಣೆಯಲ್ಲಿ ಮಹಿಳೆಯರು ಮತ್ತು ಮೀಸಲು ವರ್ಗದವರು ಮಹತ್ವದ ಪಾತ್ರವನ್ನು ವಹಿಸುವರೆಂದು ನಿರೀಕ್ಷಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಅಭ್ಯರ್ಥಿಗಳ ಆಯ್ಕೆ, ಚುನಾವಣಾ ಪೂರ್ವ ಚಾಲನೆ, ಚುನಾವಣಾ ಪ್ರಕ್ರಿಯೆ ಮತ್ತು ಚುನಾವಣಾ ನಂತರ ಅಭ್ಯರ್ಥಿಗಳ ಕಾರ್ಯ ನಿರ್ವಹಣೆಯನ್ನು ಲಿಂಗ ಪರಿಪ್ರೇಕ್ಷೆಯ ಮಾನದಂಡದಲ್ಲಿ ಅಧ್ಯಯನ ಮಾಡಿ ದಾಖಲಿಸುವ ಪ್ರಯತ್ನ ನಡೆಯಿತು. 1998ರಲ್ಲಿ ಆರಂಭವಾದ ಅಧ್ಯಯನದಲ್ಲಿ ಹಿಂದಿನ ಅವಧಿ ಸದಸ್ಯರ ವೈಯಕ್ತಿಕ ಸಾಮರ್ಥ್ಯ, ಪಂಚಾಯಿತಿಯ ಒಟ್ಟಾರೆ ಸಾಧನೆಗಳು ಹಾಗೂ ಪಂಚಾಯಿತಿಗಳ ಕಾರ್ಯನಿರ್ವಹಣೆಯಲ್ಲಿ ಪ್ರಭಾವ ಬೀರಿದ ಅಂಶಗಳನ್ನು ಗಮನಿಸಲಾಯಿತು. ಚುನಾವಣೆಗಳ ಪ್ರಕಟಣೆಯಾದ ನಂತರ ಅಧ್ಯಯನದ ಎರಡನೇ ಹಂತವು ಪ್ರಾರಂಭವಾಗಿ ಚುನಾವಣಾ ಪೂರ್ವ ಪ್ರಕ್ರಿಯೆಗಳನ್ನು

ದಾಖಲಿಸಿಕೊಳ್ಳಲಾಯಿತು. ಈ ಚುನಾವಣಾ ಪೂರ್ವ ಪ್ರಕ್ರಿಯೆಯ ವಿಶ್ಲೇಷಣೆಯು ಈವರೆಗೆ ಗಮನಿಸಲಾದ ಅಂಶಗಳನ್ನು ಎತ್ತಿ ಹಿಡಿಯುವ ಜೊತೆಗೆ ಮೊದಲ ಹಂತದ ಸಂಶೋಧನೆಯ ಒಳನೋಟಗಳಲ್ಲಿ ಕಂಡುಬಂದ ಬದಲಾವಣೆಗಳನ್ನು ವಿವರಿಸುವ ಪ್ರಯತ್ನ ಮಾಡಿದೆ.

ಕೊಪ್ಪಳ, ಮೈಸೂರು ಮತ್ತು ಉಡುಪಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಇದ್ದ ಕಾರಣ ಅವುಗಳ ಭೌಗೋಳಿಕ ಪ್ರಾತಿನಿಧ್ಯ ಮತ್ತು ಆಯಾ ಜಿಲ್ಲೆಗಳ ಅಭಿವೃದ್ಧಿಯ ನೆಲೆ. ಉತ್ತರ ಕರ್ನಾಟಕಕ್ಕೆ ಸೇರಿದ ಕೊಪ್ಪಳ ಜಿಲ್ಲೆಯು ರಾಜ್ಯದ HDI ಮತ್ತು GDI ಪಟ್ಟಿಯಲ್ಲಿ ಅತ್ಯಂತ ಕೆಳ ಪಂಕ್ತಿಯಲ್ಲಿದೆ. ಕರ್ನಾಟಕದ ಕರಾವಳಿ ಪ್ರದೇಶದ ಜಿಲ್ಲೆಯಾದ ಉಡುಪಿ HDI-GDI ಪಟ್ಟಿಯಲ್ಲಿ ಮೇಲಿನ ಸಾಲಿನಲ್ಲಿ ಇದ್ದರೆ, ಮೈಸೂರು ಜಿಲ್ಲೆಯು ಈ ಎರಡರ ಮಧ್ಯೆ ಇದ್ದು ದಕ್ಷಿಣ ಕರ್ನಾಟಕವನ್ನು ಪ್ರತಿನಿಧಿಸುತ್ತದೆ. ಈ ಮೂರರಲ್ಲಿ ಪ್ರತಿ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳನ್ನು ಕೆಳಕಂಡ ಅಂಶಗಳ ಆಧಾರದ ಮೇಲೆ ಆಯ್ಕೆ ಮಾಡಲಾಯಿತು.

1) ಮಹಿಳಾ ಮುಖ್ಯಸ್ಥರಿರುವ ಪಂಚಾಯಿತಿ.
2) ಸರ್ಕಾರೇತರ ಸಂಸ್ಥೆಗಳ ಕ್ಷೇತ್ರವ್ಯಾಪ್ತಿ.
3) ತಾಲ್ಲೂಕು ಮುಖ್ಯ ಕೇಂದ್ರದ ಸಾಮೀಪ್ಯತೆ.
4) ಪಂಚಾಯಿತಿಯ ಆರ್ಥಿಕ ಮಟ್ಟ.

ಅಧ್ಯಯನದ ಅಂಗವಾಗಿ ನಾಮಪತ್ರವನ್ನು ಸಲ್ಲಿಸಿದವರು, ನಾಮಪತ್ರವನ್ನು ಹಿಂತೆಗೆದುಕೊಂಡವರು, ಚುನಾವಣಾ ಕಣದಲ್ಲಿದ್ದವರು ಹಾಗೂ ಸ್ಥಳೀಯ ಆಡಳಿತದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುವವರೊಂದಿಗೆ ಅನೌಪಚಾರಿಕವಾಗಿ ಯಾವುದೇ ನಿಶ್ಚಿತ ವೇಳಾಪಟ್ಟಿಯಿಲ್ಲದೆ ಸಂದರ್ಶಿಸಲಾಯಿತು.



ಚುನಾವಣಾ ಪ್ರಚಾರ ಸಾಮಗ್ರಿಗಳ ವೀಕ್ಷಣೆ

ರಾಜ್ಯದಲ್ಲಿ ದೀರ್ಘಕಾಲದಿಂದ ನೆನೆಗುದಿಯಲ್ಲಿದ್ದ ಪಂಚಾಯಿತಿ ಚುನಾವಣೆಗಳು ಅನಿರೀಕ್ಷಿತವಾಗಿ ಪ್ರಕಟಗೊಂಡಾಗ ಅದನ್ನು ಅತ್ಯುತ್ಸಾಹದಿಂದಲೇ ಬರಮಾಡಿಕೊಳ್ಳಲಾಯಿತು. ಆದರೆ ಅದಕ್ಕೆ ಹಲವು ತೊಡಕುಗಳೂ ಇದ್ದುವು. ಈ ತೊಡಕುಗಳ ರೂಪುರೇಷೆಗಳು ಕೆಳಕಾಣಿಸಿದಂತಿವೆ. ಈ ತೊಡಕುಗಳು ಸಹಜವಾಗಿಯೇ ಚುನಾವಣೆ ಹಾಗೂ ರಾಜಕೀಯದ ಸ್ವಲ್ಪ ಜ್ಞಾನವಿರುವ ವ್ಯಕ್ತಿಗಳ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರಿದವು.

1. ಚುನಾವಣಾ ಪ್ರಕಟಣೆ ಹೊರಬಿದ್ದ ದಿನಾಂಕ ಹಾಗೂ ನಾಮಪತ್ರಗಳನ್ನು ಸಲ್ಲಿಸಲು ಇದ್ದ ಕಡೆಯ ದಿನಾಂಕಕ್ಕೂ ನಡುವಿನ ಅವಧಿ ಅತ್ಯಂತ ಕಡಿಮೆಯಿತ್ತು. ಇದರಿಂದಾಗಿ ಮಹಿಳೆಯರು, ಪುರುಷರು, ಅದರಲ್ಲೂ ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದವರಿಗೆ ತಮ್ಮ ಬೆಂಬಲಿಗರನ್ನು ಪರಿಚಯಿಸಲು ಅವಕಾಶ ದೊರೆಯಲಿಲ್ಲ.

2. ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಲು ಬಯಸುವ ಅಭ್ಯರ್ಥಿಯು ತನಗೆ ಹಾಗೂ ತನ್ನ ಕುಟುಂಬದವರಿಗೆ ಶೌಚಾಲಯ ಸೌಲಭ್ಯವನ್ನು ಹೊಂದಿರಲೇಬೇಕೆಂಬ ಪಂಚಾಯತ್ ರಾಜ್ ಕಾಯಿದೆಯ "ಶೌಚಾಲಯ ನಿಯಮ" ದಿಂದಾಗಿ ಅನೇಕ ಅಭ್ಯರ್ಥಿಗಳು ಸ್ಪರ್ಧಿಸಲು ಸಾಧ್ಯವಾಗಲಿಲ್ಲ. ಈ ನಿಯಮದ ಸಡಿಲಿಕೆಗೆ ನ್ಯಾಯಾಲಯವು ಒಪ್ಪಿಗೆ ನೀಡಿದ ದಿನಾಂಕ (19.2.2000) ಮತ್ತು ನಾಮಪತ್ರ ಸಲ್ಲಿಸಲು ಇದ್ದ ಕಡೆಯ ದಿನಾಂಕ ಒಂದೇ ಆಗಿದ್ದು, ಅನೇಕ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಕಳುಹಿಸಿಕೊಟ್ಟ ತುರ್ತು ಸಂದೇಶ ಗ್ರಾಮಪಂಚಾಯಿತಿಗಳಿಗೆ ಸಕಾಲದಲ್ಲಿ ತಲುಪಲಿಲ್ಲ. ಇದರ ಪರಿಣಾಮವಾಗಿ ಅನೇಕ ಉಮೇದುವಾರರು ತಮ್ಮ ನಾಮಪತ್ರಗಳನ್ನು ಸಲ್ಲಿಸಲು ಸಾಧ್ಯವಾಗಲೇ ಇಲ್ಲ.

3. ಮೀಸಲು ಸ್ಥಾನಗಳ ಆವರ್ತನ ಪದ್ಧತಿಯು ನಿಜವಾದ ಸಾಮರ್ಥ್ಯವುಳ್ಳ, ಮೀಸಲು ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಅದರಲ್ಲೂ ಮಹಿಳಾ ಅಭ್ಯರ್ಥಿಗಳಿಗೆ ನಿಜವಾದ ತೊಡಕಾಗಿದೆ. ಕಡಿಮೆ ಜನಸಂಖ್ಯೆಯಿರುವ ಮೀಸಲು ವರ್ಗದ ಕ್ಷೇತ್ರಗಳಿಗೆ ಪ್ರಾತಿನಿಧ್ಯತೆ ಅವಕಾಶ ದೊರೆಯಬೇಕೆಂಬುದು ಈ ಆವರ್ತನ ಪದ್ಧತಿಯ ಸದುದ್ದೇಶವಾಗಿದ್ದರೂ ಅನುಷ್ಠಾನದಲ್ಲಿ ಈ ಉದ್ದೇಶ ಸಫಲವಾಗಿಲ್ಲ. ಕೆಲವು ಕ್ಷೇತ್ರಗಳಲ್ಲಿ ಅನುಗುಣವಾಗಿ ಪ್ರಾತಿನಿಧ್ಯ ದೊರೆತಿಲ್ಲ. ಕೆಲವೊಮ್ಮೆ ಆಯ್ಕೆಯಾದ ಅಭ್ಯರ್ಥಿ ಮೀಸಲು ವಿಭಾಗಕ್ಕೆ ಸೇರಿದವರಾಗಿರುವುದಿಲ್ಲ. ಸ್ಥಳೀಯ ಪಕ್ಷದ ನಾಯಕರು ಹಾಗೂ ಸಮುದಾಯವು "ಮೀಸಲಲ್ಲದ ಕ್ಷೇತ್ರ" ಗಳನ್ನು ಸಾಮಾನ್ಯ ಪುರುಷ ಕ್ಷೇತ್ರವೆಂದೋ, ಅಥವಾ ಮೀಸಲು ಪುರುಷ ಕ್ಷೇತ್ರವೆಂದೋ ಅರ್ಥೈಸುತ್ತಾರೆ. ಅಧಿಕಾರ ವರ್ಗವೂ ಈ ತಪ್ಪು ಅರ್ಥವನ್ನು ನ್ಯಾಯಸಮ್ಮತವೆಂದೇ ಉಪಯೋಗಿಸುತ್ತಿದ್ದಾರೆ. ಸಾಮಾನ್ಯ, ಇತರೆ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮಹಿಳೆಯರಿಗೆ ಮೀಸಲಿಡದಿದ್ದ ಪಕ್ಷದಲ್ಲಿ, ಆ

ಸ್ಥಾನಗಳಿಗೆ ಪುರುಷರು ಮಾತ್ರ ಸ್ಪರ್ಧಿಸಬಹುದೆಂದು ಅರ್ಥೈಸಲಾಗಿದೆ. ಎಲ್ಲಾ ಪಂಚಾಯಿತಿಗಳಲ್ಲೂ ವಿಭಾಗಾವಾರು ಮೀಸಲು ಸ್ಥಾನಗಳನ್ನು ಪಟ್ಟಿಮಾಡುವ ಅಧಿಕೃತ ಪತ್ರದಲ್ಲಿ ಸಾಮಾನ್ಯ ಮೀಸಲು ಕ್ಷೇತ್ರವನ್ನು 'ಸಾಮಾನ್ಯ ಪುರುಷ' ಎಂದು ನಮೂದಿಸಿರುವುದು ಎದ್ದು ಕಾಣುತ್ತದೆ.

4. ಮತ್ತೊಂದು ಕುತೂಹಲಕಾರೀ ಅಂಶವೆಂದರೆ ಅನೇಕ ಮಂದಿ ಹಾಲಿ ಸದಸ್ಯರು ಈ ಅವಧಿಗೂ ತಮ್ಮ ನಾಮಪತ್ರವನ್ನು ಸಲ್ಲಿಸಿರುವುದು ಕಂಡುಬಂದರೆ, ಯಾವ ಹಾಲಿ ಸದಸ್ಯೆಯೂ ಮತ್ತೆ ನಾಮಪತ್ರ ಸಲ್ಲಿಸಿಲ್ಲ. ಮೀಸಲು ಸ್ಥಾನಗಳ ಆವರ್ತನ ನೀತಿಯೇ ಇದಕ್ಕೆ ಮುಖ್ಯ ಕಾರಣವೆಂಬುದು ಮತ್ತೊಮ್ಮೆ ವಿಶದವಾಗುತ್ತದೆ. ಪುರುಷ ಅಭ್ಯರ್ಥಿಗಳು ತಮ್ಮ ಕ್ಷೇತ್ರಗಳನ್ನು ಬದಲಾಯಿಸಿಕೊಂಡು ಅಥವಾ ಸಾಮಾನ್ಯ ಅಭ್ಯರ್ಥಿಗಳಾಗಿ ಮತ್ತೆ ತಮ್ಮ ನಾಮಪತ್ರಗಳನ್ನು ಸಲ್ಲಿಸಿ ನಿಭಾಯಿಸುತ್ತಿದ್ದಾರೆ. ಆದರೆ ಮಹಿಳಾ ಅಭ್ಯರ್ಥಿಗಳ ಸ್ಥಿತಿ ಬೇರೆಯೇ ಆಗಿದೆ. ಮೊದಲನೆಯದಾಗಿ, ಮಹಿಳೆಯರು 'ಸಾಮಾನ್ಯ' ಸ್ಥಾನಗಳಿಗೆ ಸ್ಪರ್ಧಿಸುವುದಿಲ್ಲ. ಎರಡನೆಯದಾಗಿ, ಹಿಂದಿನ ಅವಧಿಯಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಸಾಧಿಸಿ ತೋರಿಸಿದ್ದರೂ, ಮತ್ತೊಬ್ಬರಿಗೆ ಅವಕಾಶವನ್ನು ನೀಡುವ ನೆಪವನ್ನೊಡ್ಡಿ ಅವರಿಗೆ ಮುಂದಿನ ಅವಧಿಗೆ ನಾಮಪತ್ರ ಸಲ್ಲಿಸಲು ಅವಕಾಶ ನೀಡುತ್ತಿಲ್ಲ.

5. ಬಹುತೇಕ ಎಲ್ಲ ವಿಭಾಗಗಳಲ್ಲೂ ಸರಾಸರಿ ಮೂರು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಅಲ್ಲದೆ ಅಧಿಕಾಂಶ ಗ್ರಾಮ ಪಂಚಾಯಿತಿಗಳಲ್ಲಿ ಈ ಸ್ಥಾನಗಳನ್ನು ಕೆಳಕಂಡಂತೆ ನಿರ್ದೇಶಿಸಲಾಗುತ್ತಿದೆ. ಒಂದು ಸಾಮಾನ್ಯ ಸ್ಥಾನ, ಒಂದು ಇತರ ಹಿಂದುಳಿದ ವರ್ಗದ ಮೀಸಲು ಸ್ಥಾನ, ಕೆಲವೊಮ್ಮೆ ಪರಿಶಿಷ್ಟ ಜಾತಿ/ವರ್ಗ/ಮಹಿಳಾ ಸ್ಥಾನ. ಕೊಪ್ಪಳ ಜಿಲ್ಲೆಯಲ್ಲಿ ಕಂಡಂತೆ, ಸಾಮಾನ್ಯ ಸ್ಥಾನಕ್ಕೆ ಯಾರು ಸ್ಪರ್ಧಿಸಬಹುದೆಂಬ ವಿಷಯದಲ್ಲಿ ಕಾಯಿದೆಯ ನಿಯಮಗಳನ್ನು ತಿರುಚುವ ರೀತಿಯಲ್ಲಿ ಸಾಮಾನ್ಯ ''ಪುರುಷ'' ಸ್ಥಾನ ಎಂದು ಅರ್ಥೈಸಿ, ಜನರಿಗೆ ತಪ್ಪು ಕಲ್ಪನೆ ನೀಡಲಾಗಿದೆ.

6. ಜಾತಿ ಮತ್ತು ಸಮುದಾಯ ಗುಂಪುಗಳ ವರ್ಗೀಕರಣದಲ್ಲಿ ಸ್ಪಷ್ಟತೆಯಿಲ್ಲದ ಕಾರಣ, ಚುನಾವಣೆಯಲ್ಲಿ ಸ್ಪರ್ಧಿಸುವಾಗ ಅನೇಕ ವರ್ಗಗಳ ಪರಸ್ಪರ ಅತಿಕ್ರಮಣ ಕಾಣುತ್ತದೆ. ಕೆಲವು ಸಮುದಾಯದ ಅಭ್ಯರ್ಥಿಗಳಿಗೆ ಎರಡು ವರ್ಗಗಳಲ್ಲೂ ಸ್ಪರ್ಧಿಸುವ ಅದೃಷ್ಟವೂ ದೊರೆತಿದೆ. ಉದಾಹರಣೆ ಕೊಪ್ಪಳ ಜಿಲ್ಲೆಯಲ್ಲಿ ಲಿಂಗಾಯಿತ ಸಮುದಾಯದ ಉಪವರ್ಗವಾದ ಗಾಣಿಗ ಸಮುದಾಯವು OBC-2A/OBC-2B ಎರಡೂ ಪಟ್ಟಿಯಲ್ಲೂ ಸ್ಥಾನ ಪಡೆದಿದೆ. ಇದರಿಂದಾಗಿ ಪಂಚಾಯಿತಿಗಳಲ್ಲಿ ಈ ಸಮುದಾಯ ಅಧಿಕ ಪ್ರಾತಿನಿಧ್ಯ ಪಡೆಯುವಂತಾಗಿದೆ. ಜೊತೆಗೆ ಅಭ್ಯರ್ಥಿಗಳನ್ನು ಯಾವ ವರ್ಗದಲ್ಲಿ ಸೇರಿಸಬೇಕೆಂಬ ವಿಷಯದಲ್ಲಿ ಅನೇಕ ತಾಲ್ಲೂಕು ಅಧಿಕಾರಿಗಳಿಗೆ ಸ್ಪಷ್ಟವಾದ ಅಭಿಪ್ರಾಯವಿರುವುದಿಲ್ಲ. ಉದಾಹರಣೆಗೆ - ದೋತಿಹಾಳ ಪಂಚಾಯಿತಿಯಲ್ಲಿ ಲಿಂಗಾಯಿತ ಪಂಗಡಕ್ಕೆ ಸೇರಿದ ಪಾರನಗೌಡ ಎಂಬ ವ್ಯಕ್ತಿಗೆ ಆದಾಯ ಪತ್ರದ ನೆರವಿನಿಂದ OBC(B) ವರ್ಗದಲ್ಲಿ ಸ್ಪರ್ಧಿಸಲು ಅವಕಾಶ ದೊರೆಯಿತು.

ಸಾಧಾರಣವಾಗಿ, ಲಿಂಗಾಯಿತ ಪಂಗಡದ ವ್ಯಕ್ತಿ ಸಾಮಾನ್ಯ ವರ್ಗದಲ್ಲಿ ಸ್ಪರ್ಧಿಸಬೇಕಾಗುತ್ತದೆ.

## ಭಾಗ: 2 ಸ್ಥಳೀಯ ಪಂಚಾಯಿತಿ ಚಾಲನೆಯಲ್ಲಿ ಹೊರಹೊಮ್ಮಿದ ಅಂಶಗಳು

1. ಎಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರಿಗಾಗಿ ಮೀಸಲಿರಿಸಿದ ಸ್ಥಾನಗಳು ನಿರ್ಧಾರಿತ ಶೇ. 33 ಕ್ಕಿಂತ ಹೆಚ್ಚಾಗಿವೆ.

2. ಅಧ್ಯಯನಕ್ಕೆ ಆಯ್ದುಕೊಂಡ ಕ್ಷೇತ್ರಗಳ ಬಹುಪಾಲು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

3. ಒಂದು ಕ್ಷೇತ್ರವನ್ನು ಹೊರತು ಪಡಿಸಿ, ಈ ಎಲ್ಲಾ ಕ್ಷೇತ್ರಗಳಲ್ಲೂ ಅಧಿಕಾರದಲ್ಲಿ ಮಹಿಳಾ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಗೊಂಡಿರುವುದು ಕಂಡುಬಂದಿದೆ. ಇದರಿಂದ ಉದ್ಭವಿಸುವ ಎರಡು ಪ್ರಶ್ನೆಗಳು:

   - ಈ ರೀತಿ ಸದಸ್ಯರುಗಳನ್ನು ಚುನಾಯಿಸುವುದು ಸಮುದಾಯದ ಆರೋಗ್ಯಕ್ಕೆ ಒಳ್ಳೆಯದೇ ?
   - ನಾವು ಈ ಅಧಿಕಾಂಶದ ಬಗ್ಗೆ ಆಸಕ್ತಿವಹಿಸಿ, ಇದನ್ನು ಅವಿರೋಧವಾಗಿ ಆಯ್ಕೆಗೊಂಡ ಮಹಿಳಾ ಸ್ಥಾನಗಳೊಂದಿಗೆ ತಳುಕುಹಾಕಿ ನೋಡಬೇಕೆ ?

   ಈ ಪ್ರಶ್ನೆಗಳ ಬಗ್ಗೆ ಆಳವಾದ ಚಿಂತನೆಯ ಅಗತ್ಯವಿದೆ. ನಮ್ಮ ಮೊದಲ ಹಂತದ ಅಧ್ಯಯನದಲ್ಲಿ ಕಂಡುಬಂದಂತೆ, ಅವಿರೋಧವಾಗಿ ಆಯ್ಕೆಯಾದ ಮಹಿಳಾ ಅಭ್ಯರ್ಥಿಗಳು ತಮ್ಮ ಕ್ಷೇತ್ರಕ್ಕೆ ಹೆಚ್ಚು ಬದ್ಧರಾಗಿಲ್ಲ ಮತ್ತು ಹೆಚ್ಚು ಹೊಣೆಗಾರಿಕೆಯನ್ನು ಹೊರುವುದಿಲ್ಲ ಎಂಬ ಅಂಶವನ್ನು ಗಮನಿಸಿದರೆ ಈ ಮೇಲಿನ ಪ್ರಶ್ನೆಗಳನ್ನು ಕುರಿತಂತೆ ಆಳವಾದ ಚಿಂತನೆಯ ಅಗತ್ಯವಿದೆ. ಅಲ್ಲದೇ ತಮ್ಮ ಅಧಿಕಾರ ಅವಧಿ ಮುಗಿದ ನಂತರವೂ ಅವರು ತಮ್ಮದೇ ಆದ ಕ್ಷೇತ್ರವೊಂದನ್ನು ರೂಪಿಸಿಕೊಳ್ಳುವಲ್ಲಿ ಅಸಫಲರಾಗಿರುವುದೂ ಕಂಡುಬಂದಿದೆ.

4. ಇದು ಗ್ರಾಮಪಂಚಾಯಿತಿಯ ಮೂರನೇ ಅವಧಿಯಾದರೂ, ಬಹುಪಾಲು ಮಹಿಳಾ ಸದಸ್ಯರು ಇನ್ನೂ ರಾಜಕೀಯದ ನವಶಿಷ್ಯರಾಗಿಯೇ ಉಳಿದಿದ್ದಾರೆ. ಅಭಿವೃದ್ಧಿಗೆ ಅನುಗುಣವಾಗಿ ಜಿಲ್ಲೆಯಿಂದ ಜಿಲ್ಲೆಗೆ ಸಾಕಷ್ಟು ಅಂತರವಿದ್ದರೂ, ಈ ಒಂದು ವಿಷಯದಲ್ಲಿನ ಸ್ಥಿತಿ ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಆಗಿರುವುದು ಉಲ್ಲೇಖಾರ್ಹ.

5. ಬಹುತೇಕ ಪುರುಷ ಅಭ್ಯರ್ಥಿಗಳೂ ರಾಜಕೀಯವಾಗಿ ಅನನುಭವಿಗಳೆಂದು ಪರಿಗಣಿಸಬಹುದು. ಆದರೂ ಪುರುಷ ಅಭ್ಯರ್ಥಿಗಳು ಅನೌಪಚಾರಿಕ ರಾಜಕೀಯ ತರಬೇತಿ ಪಡೆದಿರುತ್ತಾರೆ. ಅನೇಕರು ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ

ಪ್ರಚಾರ ಕಾರ್ಯದ ಅನುಭವ ಪಡೆದಿರುತ್ತಾರೆ. ಉಳಿದವರು ಸ್ಥಳೀಯ ಸಾಮಾಜಿಕ ಸಂಘಸಂಸ್ಥೆಗಳಲ್ಲಿ, ಧಾರ್ಮಿಕ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ.

6. ಕರ್ನಾಟಕದ ಪಂಚಾಯತ್ ರಾಜ್ 1993ರ ಅಧಿನಿಯಮವು ಗ್ರಾಮ ಪಂಚಾಯಿತಿಗಳು ಸ್ಥಳೀಯ ಆಡಳಿತದ ರಾಜಕೀಯೇತರ ಘಟಕಗಳು ಎಂಬುದನ್ನು ಸ್ಪಷ್ಟೀಕರಿಸಿ, ಈ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಿಗೆ ಯಾವುದೇ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಸ್ಪರ್ಧಿಸುವಂತಿಲ್ಲ ಎಂದು ಶಾಸಿಸಿದ್ದರೂ ನಮ್ಮ ಕ್ಷೇತ್ರ ಮಟ್ಟದ ಅನುಭವ ಇದನ್ನು ಅಲ್ಲಗೆಳೆದಿದೆ. ಈ ಚುನಾವಣೆಗಳ ವಿವಿಧ ಹಂತಗಳಲ್ಲಿ ರಾಷ್ಟ್ರಮಟ್ಟದ ರಾಜಕೀಯ ಪಕ್ಷಗಳ ಪ್ರಭಾವವಿರುವುದು ನಿಚ್ಚಳವಾಗಿ ಕಂಡುಬಂದಿದೆ.

- ಅಭ್ಯರ್ಥಿಗಳು ಯಾವುದೇ ಸಂಕೋಚವಿಲ್ಲದೇ ತಾವು ಯಾವ ಪಕ್ಷಕ್ಕೆ ಸೇರಿದವರೆಂಬುದನ್ನು ಪ್ರಕಟಿಸಿದ್ದಾರೆ. ಅನೇಕ ಸ್ವತಂತ್ರ ಅಭ್ಯರ್ಥಿಗಳೂ ಸಹ ರಾಜಕೀಯ ಪಕ್ಷದ ಬೆಂಬಲ ಪಡೆಯಲು ಪ್ರಯತ್ನಿಸಿದ್ದಾರೆ.

- ಚುನಾವಣೆಯು ಪ್ರಕಟವಾದ ಕೂಡಲೇ, ಎಲ್ಲ ಪಂಚಾಯಿತಿಗಳಲ್ಲೂ ರಾಜಕೀಯ ಪಕ್ಷಗಳು ಸಭೆಗಳನ್ನು ಕರೆದು ಚರ್ಚೆ ನಡೆಸಿವೆ.

- ಈ ಸಭೆಗಳಲ್ಲಿ ಸ್ಥಳೀಯ ಪಕ್ಷದ ನಾಯಕರು ಮತ್ತು ಬೆಂಬಲಿಗರು ಭಾಗವಹಿಸಿ ಅಭ್ಯರ್ಥಿಗಳ ಪಟ್ಟಿಯನ್ನು ನಿರ್ಧರಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅಭ್ಯರ್ಥಿಯೇ ಸಭೆಗೆ ಬಾರದಿದ್ದರೂ, ಆ ಅಭ್ಯರ್ಥಿಯನ್ನು ಈ ಪಕ್ಷಗಳು ಬೆಂಬಲಿಸಿರುವುದು ಕಂಡು ಬಂದಿದೆ. ಇದು ಹೆಚ್ಚಾಗಿ ಮಹಿಳಾ ಅಭ್ಯರ್ಥಿಗಳ ವಿಷಯದಲ್ಲಿ, ಸ್ವಲ್ಪಮಟ್ಟಿಗೆ ಪರಿಶಿಷ್ಟ ಜಾತಿ/ಪಂಗಡಗಳ ಪುರುಷ ಅಭ್ಯರ್ಥಿಯ ಆಯ್ಕೆ ವಿಷಯದಲ್ಲಿ ಕಂಡುಬಂದಿದೆ.

- ಅನೇಕ ಪಂಚಾಯಿತಿಗಳಲ್ಲಿ ತಾಲ್ಲೂಕು - ಜಿಲ್ಲಾ ಮಟ್ಟದ ಪಕ್ಷದ ನಾಯಕರು ಕೆಲವು ಕಡೆ ವಿಧಾನಸಭಾ ಸದಸ್ಯರೂ ಈ ಚುನಾವಣೆಯ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಪಕ್ಷವು ಬೆಂಬಲಿಸುವ ಅಭ್ಯರ್ಥಿಯ ಪರವಾಗಿ ಅನೇಕ ಸಾಮರ್ಥ್ಯಶಾಲಿ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತಹ ತಂತ್ರಗಳನ್ನೂ ಹೂಡಲಾಗಿದೆ.

- ಚುನಾವಣೆಯಲ್ಲಿ ಪಕ್ಷದ ಚಿನ್ಹೆಯನ್ನು ಉಪಯೋಗಿಸದಿದ್ದರೂ, ಅಭ್ಯರ್ಥಿಗಳ ಯಾದಿಯನ್ನು ಪಕ್ಷಗಳಿಗನುಗುಣವಾಗಿಯೇ ತಯಾರಿಸಲಾಗಿದೆ. ಮತಯಾಚನೆಯ ಮುದ್ರಿತ ಕರಪತ್ರಗಳ ಮುದ್ರಣ ವೆಚ್ಚವನ್ನು ಪಕ್ಷವೇ ಭರಿಸಿ, ಪತ್ರಗಳಲ್ಲಿ ಪಕ್ಷದ ಬೆಂಬಲಿಗರ ಹೆಸರುಗಳನ್ನು ವಿಭಾಗಾವಾರು ಮುದ್ರಿಸಲಾಗಿದೆ.

7. ಬಹುತೇಕ ಮಹಿಳಾ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಲು ಅವರ ಕುಟುಂಬದವರ ಪ್ರಭಾವ ಅಥವಾ ರಾಜಕೀಯ ಪಕ್ಷಗಳೊಂದಿಗಿನ ಸಂಬಂಧಗಳೇ ಕಾರಣ. ಮಹಿಳಾ ಅಭ್ಯರ್ಥಿಗಳು ಮೀಸಲು ಸ್ಥಾನಗಳಿಗೆ ಮಾತ್ರ ಸ್ಪರ್ಧಿಸಿರುವುದು

ಮಾತ್ರವಲ್ಲ, ಅದು ಅವರ ಕುಟುಂಬದಲ್ಲಿನ ಪುರುಷರು ಪಕ್ಷಕ್ಕಾಗಿ ಅನೇಕ ವರ್ಷಗಳ ಕಾಲ ದುಡಿದಿರುವುದಕ್ಕೆ ನೀಡಿದ ಪ್ರತಿಫಲವೆಂದೂ ಆಗಿದೆ. ಇದಕ್ಕೆ ವಿರುದ್ಧವಾಗಿ ಪುರುಷರು ಕೆಳಗಿನ ಕಾರಣಗಳಿಗಾಗಿ ನಾಮ ನಿರ್ದೇಶಿತರಾಗಿದ್ದಾರೆ.

- ಸ್ಥಳೀಯ ನಾಯಕನೊಂದಿಗಿನ ಹತ್ತಿರದ ಸಂಬಂಧ.
- ಸ್ವಂತ ಸಾಮರ್ಥ್ಯದಿಂದ ನಾಯಕರಾಗಿರುವುದು.
- ನಿರ್ದಿಷ್ಟ ಪಂಗಡದಿಂದ ಬೇರ್ಪಟ್ಟ ವ್ಯಕ್ತಿಯಾಗಿರುವುದು.
- ಸ್ಥಳೀಯ ಸಾಮಾಜಿಕ-ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಸಂಘಟಕರಾಗಿ ಜನಪ್ರಿಯರಾಗಿರುವುದು.
- ಉದಾರಿಯಾದ ಜಮೀನುದಾರನಾಗಿರುವುದು.

8. ಉಡುಪಿ ಜಿಲ್ಲೆಯಲ್ಲಿನ ಇಬ್ಬರು ಹಾಲಿ ಮಹಿಳಾ ಸದಸ್ಯರು ಈ ಮೂರನೆಯ ಅವಧಿಯ ಚುನಾವಣೆಗೂ ಪುನರ್ನಾಮಕರಣಗೊಂಡಿರುವುದಕ್ಕೆ ಹೋಲಿಸಿದರೆ ಹೆಚ್ಚು ಮಂದಿ ಹಾಲಿ ಪುರುಷ ಸದಸ್ಯರು ಈ ಅವಧಿಗೆ ಪುನರ್ನಾಮಕರಣಗೊಂಡಿರುವುದು ಕಂಡುಬಂದಿದೆ. ಕಳೆದ ಅವಧಿಯಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ ಅನೇಕ ಮಹಿಳೆಯರು ಮತ್ತೆ ತಮ್ಮ ಪಕ್ಷದಿಂದ ಒಬ್ಬರಿಗಾದರೂ ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ಪುರಸ್ಕರಿಸದಿರುವ ಉದಾಹರಣೆಗಳಿವೆ.

9. ಮಹಿಳಾ ಸದಸ್ಯರು ಅದರಲ್ಲೂ ಮೀಸಲು ವರ್ಗಕ್ಕೆ ಸೇರಿದ ಸದಸ್ಯರಲ್ಲಿ ಒಂದು ರೀತಿಯ ಸಾಮಾನ್ಯವಾದ ನಿರಾಸಕ್ತಿ ಕಂಡು ಬಂದಿದೆ. ಇದಕ್ಕೆ ಬಹುಶಃ ಈ ಅಭ್ಯರ್ಥಿಗಳು ತಾವು ಚುನಾಯಿತರಾದ ಕ್ಷೇತ್ರಗಳ ಅಥವಾ ಪಂಗಡಗಳ ನಿರೀಕ್ಷಿತ ಮಟ್ಟಕ್ಕೆ ಕೆಲಸ ಮಾಡಲಾಗದುದೇ ಕಾರಣವಿರಬಹುದು.

10. ಹಾಲಿ ಅಧ್ಯಕ್ಷ ಸ್ಥಾನದಲ್ಲಿರುವ ಅನೇಕ ಮಹಿಳೆಯರು ಮತ್ತೆ ಸ್ಪರ್ಧಿಸಲು ಇಚ್ಛೆ ತೋರಿಸಿಲ್ಲ. ಚುನಾವಣೆಯಲ್ಲಿ ಸೋತುಹೋಗುವ ಅಥವಾ ಗೆದ್ದರೂ ಮುಂದೆ ಸಾಮಾನ್ಯ ಸದಸ್ಯರಾಗಿರಬೇಕಾಗಬಹುದೆಂಬ ಕಲ್ಪನೆಯಿಂದಾಗಿ, ಹಾಗೂ ಅದು ಅವರ ದೃಷ್ಟಿಯಲ್ಲಿ ಹಿಂಬಡ್ತಿಯೆನಿಸಿರುವುದು ಬಹುಶಃ ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸಲು ಮುಂದೆ ಬಾರದಿರುವುದಕ್ಕೆ ಕಾರಣವಾಗಿದೆ.

11. ಮಹಿಳಾ ಸದಸ್ಯರೇ ಹೇಳಿದಂತೆ ಚುನಾವಣೆಯಲ್ಲಿ ಸೋತರೆ ಅದು ಅವರ ರಾಜಕೀಯ ಜೀವನದ ಪರಿಸಮಾಪ್ತಿಯಾಗಬಹುದೆಂಬ ಹೆದರಿಕೆಯೂ ಸೇರಿದೆ. ಅನೇಕ ಮಹಿಳೆಯರು ತಮ್ಮದೇ ಆದ ಚುನಾವಣಾ ಕ್ಷೇತ್ರವನ್ನು ನಿರ್ಮಿಸಿಕೊಳ್ಳುವಲ್ಲಿ ಸಫಲರಾಗಿಲ್ಲ. ಇದರಿಂದಾಗಿ ಅವರು ಮತ್ತೆ ಚುನಾವಣಾ ಅಭ್ಯರ್ಥಿಯಾಗಲು ಬೇಡಿಕೆ ಮುಂದಿಟ್ಟಿಲ್ಲ. ಇದು ಹಿಂದಿನ ಅವಧಿಯಲ್ಲಿ ಅವಿರೋಧವಾಗಿ ಆಯ್ಕೆಯಾದ ಮಹಿಳೆಯರಿಗೆ ಹೆಚ್ಚಾಗಿ ಅನ್ವಯಿಸುತ್ತದೆ.

12. ಹಿಂದಿನ ಅವಧಿಯಲ್ಲಿ ಅವಿರೋಧವಾಗಿ ಆಯ್ಕೆಯಾದ ಮಹಿಳಾ ಸದಸ್ಯರು ದಕ್ಷರಾಗಿದ್ದರೂ ಚುನಾವಣೆಯೆಂದರೆ ಹೆದರಿಕೆಯುಳ್ಳವರಾಗಿದ್ದಾರೆ.

13. ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಲು ಮೊದಲ ಅಡ್ಡಿ ಅವರು ಅವಿದ್ಯಾವಂತರಾಗಿರುವುದೇ ಎಂದು ಚಿತ್ರಿತವಾಗಿದ್ದರೂ ಇದು ಆಧಾರ ರಹಿತವೆಂಬುದು ಅಧ್ಯಯನದ ಮೂಲಕ ತಿಳಿದು ಬಂದಿದೆ. ಆದಾಗ್ಯೂ ಚುನಾವಣೆಯ ವೆಚ್ಚ ಭರಿಸುವ ಶಕ್ತಿಯುಳ್ಳ ಕುಟುಂಬದಿಂದ ಬಂದ ಮಹಿಳೆಯರನ್ನು ಅವರ ವಿದ್ಯಾರ್ಹತೆ ಗಣನೆಗೆ ತೆಗೆದುಕೊಳ್ಳದೇ ಸ್ಪರ್ಧಾಕಣದಲ್ಲಿ ನಿಲ್ಲಿಸಿರುವ ಉದಾಹರಣೆಗಳಿವೆ.

14. ಚುನಾವಣಾ ಪೂರ್ವ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾತ್ರ ಗೌಣವಾಗಿದೆ.

15. ಆದರೂ ಗಮನಾರ್ಹ ವಿಷಯವೆಂದರೆ, ಚುನಾವಣೆಗಳಲ್ಲಿ ಮಹಿಳೆಯರ ಆಸಕ್ತಿ ಅಂಶಿಕ ಮತ್ತು ಸೀಮಿತವಾದುದಾದರೂ ಅವರ ಆತ್ಮವಿಶ್ವಾಸದ ಮಟ್ಟ ಗಣನೀಯವಾಗಿ ಹೆಚ್ಚಿದೆ. ಅನೇಕ ಮಂದಿ ಮಹಿಳೆಯರು ಮೊದಲ ಸುತ್ತಿನ ಸಂದರ್ಶನದಲ್ಲಿ ಅಂದರೆ ನಾಮಪತ್ರ ಸಲ್ಲಿಕೆಯ ಕೊನೆಯ ದಿನದ ನಂತರ ಮಾತನಾಡಲು ಸಂಕೋಚ ಪಟ್ಟುಕೊಂಡರೂ ಎರಡನೇ ಸುತ್ತಿನಲ್ಲಿ ಅಂದರೆ ಚುನಾವಣೆಯ ಮುನ್ನಾದಿನ ಮತ್ತು ಚುನಾವಣೆಯ ದಿನ ತಾವಾಗಿಯೇ ಮುಂದೆ ಬಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

16. ಒಟ್ಟಾರೆ ಹೇಳುವುದಾದರೆ, ಜಾತಿ, ವರ್ಗ ಮತ್ತು ರಾಜಕೀಯ ಪಕ್ಷಗಳೊಂದಿಗಿನ ಸಂಬಂಧಗಳು ಅಭ್ಯರ್ಥಿಯ ಆಯ್ಕೆಯಲ್ಲಿ (ನಿರ್ದಿಷ್ಟ ವಿಭಾಗ ಅಥವಾ ಹಳ್ಳಿಗಳಲ್ಲಿ ಹಾಗೂ ಗೆಲುವಿನ ಸಂಭವವನ್ನು ನಿರ್ಧರಿಸುವಲ್ಲಿ) ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇದರಲ್ಲಿ ಮೂರು ರೀತಿಯ ಲೆಕ್ಕಾಚಾರಗಳನ್ನು ಕಾಣಬಹುದು.

- ಜಾತಿ/ಪಂಗಡ : ಯಾವುದೇ ವಿಭಾಗದಲ್ಲಿ ಜಾತಿ/ಪಂಗಡದ ಜನಸಂಖ್ಯೆ
- ಗ್ರಾಮದ ಜನಸಂಖ್ಯೆ : ಯಾವುದೇ ವಿಭಾಗದಲ್ಲಿ ಎರಡು ಅಥವಾ ಮೂರು ಹಳ್ಳಿಗಳಿರಬಹುದು. ಅಭ್ಯರ್ಥಿಯು ಒಂದು ಹಳ್ಳಿಗೆ ಸೇರಿದವನಾಗಿದ್ದರೆ, ಆ ಗ್ರಾಮದ ಜನಸಂಖ್ಯೆಯು ಅಭ್ಯರ್ಥಿಯ ಗೆಲುವಿನಲ್ಲಿ ಮುಖ್ಯ ಅಂಶವಾಗುತ್ತದೆ.
- ರಾಜಕೀಯ ಪಕ್ಷಗಳೊಂದಿಗಿನ ಸಂಬಂಧ ಅಭ್ಯರ್ಥಿಯ ಗೆಲುವನ್ನು ನಿರ್ಣಯಿಸುತ್ತದೆ.

ಈ ಲೆಕ್ಕಾಚಾರದ ಆಧಾರದ ಮೇಲೆ ನಾವು ಸ್ಥಳೀಯ ಚಾಲನ ಶಕ್ತಿಯನ್ನು, ಅಭ್ಯರ್ಥಿ ಗೆಲ್ಲುವ ಸಂಭವವನ್ನು ಅರ್ಥಮಾಡಿಕೊಳ್ಳಬಹುದು. ಜಾತಿ, ಹಳ್ಳಿ, ಪಕ್ಷ, ಮತ್ತು ಕುಟುಂಬದ ರಾಜಕೀಯ ಹಿನ್ನಲೆ ಮತ್ತು ಸಾಂಘಿಕ ಯತ್ನಗಳು ಅಭ್ಯರ್ಥಿಯ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.



ಮಾನ್ಯ ಮಂತ್ರಿಗಳೊಂದಿಗೆ ತಮ್ಮ ಕಳಕಳಿ ಹಂಚಿಕೆ



ಮಾನ್ಯ ಮಂತ್ರಿಗಳು ಹಾಗೂ NIAS ನಿರ್ದೇಶಕರೊಂದಿಗೆ ಸದಸ್ಯರ ಸಂವಾದ



*ಪ್ರಶ್ನೆ ಕೇಳುತ್ತಿರುವ ಗ್ರಾ. ಪಂ. ಸದಸ್ಯ ಕೃಷ್ಣ*

17. ಪ್ರಸಕ್ತ ಅಧ್ಯಯನದಲ್ಲಿ ಕಂಡುಬಂದ ಅನೇಕ ಅಂಶಗಳಲ್ಲಿ ಕೆಲವು ಮುಖ್ಯ ಸೂಚಿಗಳನ್ನು ಗುರುತಿಸಬಹುದು.

- ಪ್ರಸ್ತುತ ನಾವು ಒಂದು ರೀತಿಯ ಅಸಂಗತ ಸ್ಥಿತಿಯಲ್ಲಿದ್ದೇವೆ. ಗ್ರಾಮ ಪಂಚಾಯಿತಿಗಳು ರಾಜಕೀಯ ಪ್ರಭಾವದಿಂದ ಹೊರಗಿರುವ ಸಂಸ್ಥೆಗಳಾದರೂ ಎಲ್ಲ ಹಂತಗಳಲ್ಲೂ ರಾಜಕೀಯ ಪ್ರಭಾವ ಕಂಡುಬರುತ್ತಿದೆ.

- ರಾಜಕೀಯವಲ್ಲದ ಸ್ಥಿತಿಯಲ್ಲೂ ರಾಜಕೀಯ ವ್ಯಕ್ತಿಗಳ ಲೆಕ್ಕಾಚಾರವೇ ಪ್ರಧಾನವಾಗಿ ಕಾಣುತ್ತದೆ.

- ಪಂಚಾಯಿತಿ ಚುನಾವಣೆಗಳಲ್ಲಿ ಕೆಲವೇ ಹಾಲಿ ಸದಸ್ಯರುಗಳು ಪುನರಾಯ್ಕೆಗೊಳ್ಳುತ್ತಿರುವ ಮತ್ತು ಹೆಚ್ಚಿನ ಸಂಖ್ಯೆಯ ಸದಸ್ಯರು ಅವಿರೋಧವಾಗಿ ಆಯ್ಕೆಗೊಳ್ಳುತ್ತಿರುವ ವಿದ್ಯಮಾನವನ್ನು, ಪ್ರಸ್ತುತ ಸಮಾಜದಲ್ಲಿನ ರಾಜಕೀಯ ಸಂಸ್ಕೃತಿಯ ಬದಿಯಲ್ಲಿಟ್ಟು ನೋಡಿದಾಗ ರಾಜಕೀಯ ವ್ಯಕ್ತಿಗಳೇ ಪದೇ ಪದೇ ಪುನರಾಯ್ಕೆಗೊಳ್ಳುತ್ತಿರುವ ಅಂಶ ಕಂಡುಬರುತ್ತದೆ.

- ಗ್ರಾಮ ಪಂಚಾಯಿತಿಗಳು ಈವರೆಗೆ ಅಸ್ತಿತ್ವದಲ್ಲಿದ್ದ ಅನೌಪಚಾರಿಕ ಪೋಷಕತ್ವ ವ್ಯವಸ್ಥೆಯನ್ನು ವಿಧ್ಯುಕ್ತಗೊಳಿಸಲು ಅವಕಾಶ ಮಾಡಿಕೊಡುತ್ತದೆ.

- ಇಷ್ಟೆಲ್ಲಾ ಶಂಕೆಗಳ ನಡುವೆಯೂ ಅವಕಾಶ ವಂಚಿತ ವರ್ಗದವರಿಗೆ ಅದರಲ್ಲೂ ಮಹಿಳೆಯರಿಗೆ ಸಾಂಸ್ಥಿಕ ಮತ್ತು ಸಾಮಾಜಿಕ-ರಾಜಕೀಯ ಅವಕಾಶವನ್ನು ಕಲ್ಪಿಸಿಕೊಟ್ಟ 73ನೇ ತಿದ್ದುಪಡಿಯ ಅಮೂಲ್ಯ ಕೊಡುಗೆಯನ್ನು ಮತ್ತೆ ಮತ್ತೆ ಒತ್ತಿ ಹೇಳಬೇಕಾಗಿದೆ.

ಅಧ್ಯಯನದಲ್ಲಿ ಕಂಡುಬಂದ ಅಂಶಗಳ ಮಂಡನೆಯಾದ ನಂತರ ಅದರ ಬಗ್ಗೆ ಚರ್ಚೆ ಆರಂಭವಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ಕೆ.ಎಸ್. ಕೃಷ್ಣಸ್ವಾಮಿ (ಮಾಜಿ ಡೆಪ್ಯುಟಿ ಗವರ್ನರ್, ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಮೌಲ್ಯಮಾಪನ ಸಮಿತಿಯ ಅಧ್ಯಕ್ಷರು) ರವರು ಹೊಸದಾಗಿ ಚುನಾಯಿತರಾದ ಪಂಚಾಯಿತಿ ಸದಸ್ಯರನ್ನು ಅವರ ವಿಚಾರ ಹಾಗೂ ಸಂದೇಹಗಳನ್ನು ಮಂತ್ರಿಗಳೊಡನೆ ಹಂಚಿಕೊಳ್ಳಲು ಆಹ್ವಾನಿಸಿದರು.

ಚರ್ಚೆಯಲ್ಲಿ ಪ್ರಸ್ತಾಪಗೊಂಡ ಅಂಶಗಳು - ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯ ನಿಯಮಗಳ ಸ್ಪಷ್ಟೀಕರಣ ಹಾಗೂ ಅವುಗಳ ಅನುಷ್ಠಾನದಲ್ಲಿ ಕಂಡುಬಂದ ಅಸಮತೆಗಳು. ಮುಖ್ಯವಾಗಿ ಮೀಸಲು ಸ್ಥಾನಗಳ ವಿತರಣೆ ಮತ್ತು ಆವರ್ತನಗಳಲ್ಲಿನ ಹೊಸರೀತಿಗಳು ಮತ್ತು ಕಾಯಿದೆಗೆ ಕೆಲವು ತಿದ್ದುಪಡಿಗಳು.

ಸದಸ್ಯರು ಹಾಗೂ ಇತರ ಸಭಿಕರ ಸಂದೇಹಗಳು ಮತ್ತು ಮಾನ್ಯ ಸಚಿವರ ಉತ್ತರಗಳ ಸಂಕ್ಷಿಪ್ತ ವಿವರ ಹೀಗಿದೆ.

ಮೈಸೂರು ಜಿಲ್ಲೆಯ ಎನ್. ಬೆಳ್ಳತ್ತೂರು ಪಂಚಾಯಿತಿಗೆ ಎರಡನೇ ಬಾರಿ ಆಯ್ಕೆಗೊಂಡ ಶ್ರೀ. ಕೃಷ್ಣ ಅವರು ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಒಟ್ಟು ಇರುವ 33 ಪಂಚಾಯಿತಿಗಳಿಗೆ BCM-B ವರ್ಗಕ್ಕೆ ಕೇವಲ ಎರಡು ಸ್ಥಾನಗಳನ್ನು ಮಾತ್ರ ನೀಡಿರುವುದನ್ನು ಸಚಿವರ ಗಮನಕ್ಕೆ ತಂದು, ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳ ವರ್ಗವಾರು ವಿವರಣೆಗೆ ಸಂಬಂಧಿಸಿದಂತೆ ಸ್ಪಷ್ಟನೆಯನ್ನು ಬಯಸಿದರು.

73ನೇ ತಿದ್ದುಪಡಿಯನ್ನು ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಹೆಸರಿಸಿದ ಸಚಿವರು ಮಹಿಳೆಯರಿಗೆ 1/3 ಭಾಗ, ಇತರೆ ಹಿಂದುಳಿದ ವರ್ಗದವರಿಗೆ 1/3 ಭಾಗ ಮತ್ತು ಪರಿಶಿಷ್ಟ ಜಾತಿ ವರ್ಗದವರಿಗೆ ಕನಿಷ್ಠ ಸ್ಥಾನಗಳನ್ನು ಒಟ್ಟು ಜನಸಂಖ್ಯೆಯಲ್ಲಿ ಅವರ ಪ್ರಾತಿನಿಧ್ಯಕ್ಕನುಗುಣವಾಗಿ ಮೀಸಲಾಗಿಡಲಾಗಿದೆ. ಈ ಸ್ಥಾನಗಳ ಸರದಿ ಪ್ರತಿ ಐದು ವರ್ಷಗಳಿಗೊಮ್ಮೆ ಬರುವುದರಿಂದ ಯಾವುದೇ ವರ್ಗಕ್ಕೆ ಅದೇ ಕ್ಷೇತ್ರವನ್ನು ಮತ್ತೆ ಹಂಚಲಾಗುವುದಿಲ್ಲ. ಆದರೆ ಎರಡನೇ ಸ್ಥಾನದಲ್ಲಿರುವ ಕ್ಷೇತ್ರಕ್ಕೆ ಹಂಚಲಾಗುವುದು. OBC ವರ್ಗದ ನಿಖರವಾದ ಜನಸಂಖ್ಯೆ ಜನಗಣತಿಯಲ್ಲಿ ಸಿಗುವುದಿಲ್ಲ. ಆದಾಗ್ಯೂ 1/3 ಭಾಗದಷ್ಟು ಮೀಸಲಾತಿಯನ್ನು ಈ ವರ್ಗಕ್ಕೆ ಲೆಕ್ಕ ಹಾಕಲಾಗಿದೆ. ಅಧ್ಯಕ್ಷ ಸ್ಥಾನದ ಮೀಸಲಾತಿಯ ಪ್ರಶ್ನೆ ಬಂದಾಗ 1/3 ರಷ್ಟು ಪಂಚಾಯಿತಿಗಳು OBC ವರ್ಗಕ್ಕೆ ಸೇರಿದ ಅಧ್ಯಕ್ಷರನ್ನು ಹೊಂದಬೇಕಾಗುತ್ತದೆ. ಹಿಂದೆ ರಾಜ್ಯ ಸಚಿವಾಲಯ ನಿರ್ವಹಿಸುತ್ತಿದ್ದ ಈ ಹಂಚಿಕೆ ಕೆಲಸವನ್ನು ಈಗ ರಾಜ್ಯ ಚುನಾವಣಾ ಆಯೋಗ ಮಾಡುತ್ತಿದೆ. ಆಯೋಗವು ಎಲ್ಲಿ OBC ವರ್ಗದ ಜನಸಂಖ್ಯೆ ಹೆಚ್ಚಾಗಿದೆಯೋ ಆ ಪಂಚಾಯಿತಿಗೆ OBC ವರ್ಗದ ಅಧ್ಯಕ್ಷ ಸ್ಥಾನವನ್ನು ಮೀಸಲಿರಿಸುತ್ತದೆ. ಇಂತಹ ಪಂಚಾಯಿತಿಗಳು ನಿರ್ದಿಷ್ಟ ಸಂಖ್ಯೆಗಿಂತ ಹೆಚ್ಚಾಗಿದ್ದಲ್ಲಿ ಚೀಟಿ ಎತ್ತುವ ಮೂಲಕ ಆಯ್ಕೆ ನಡೆಯುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಇದು ಸರಿಯಾದ

ಮಾರ್ಗವೆಂದು ಹೇಳಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ 1/3 ಭಾಗದ OBC ಅಧ್ಯಕ್ಷ ಸ್ಥಾನಗಳಲ್ಲಿ ಶೇಕಡಾ 80 ರಷ್ಟು ಸ್ಥಾನಗಳನ್ನು OBC-A ವರ್ಗಕ್ಕೂ ಉಳಿದ ಶೇಕಡ 20ರ ಭಾಗವನ್ನು OBC-B ವರ್ಗಕ್ಕೂ ಮೀಸಲಿರಿಸಲಾಗುತ್ತದೆ. ಇದರಿಂದಾಗಿ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ 2 ಸ್ಥಾನಗಳನ್ನು ಮಾತ್ರ ಮೀಸಲಿರಿಸಿದೆ ಎಂದು ಸ್ಪಷ್ಟೀಕರಿಸಿದರು.

ಶಿವಮೊಗ್ಗ ಜಿಲ್ಲೆಯ ಮೈದೊಳಲು ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀ ಜಗದೀಶ್ ಅವರು ಇಂತಹುದೇ ಪ್ರಶ್ನೆಯನ್ನು ಹಾಕಿದರು. ಮೈದೊಳಲು ಪಂಚಾಯಿತಿ ವ್ಯಾಪ್ತಿಯಲ್ಲಿ ಅತಿ ಹೆಚ್ಚಿನ ಪರಿಶಿಷ್ಟ ಜಾತಿಯ ಜನಸಂಖ್ಯೆ ಮೈದೊಳಲು ವಿಭಾಗದಲ್ಲಿಯೇ ಇದೆ. ಇದರಿಂದ ಕಳೆದ ಅವಧಿಯಲ್ಲಿ ಈ ವಿಭಾಗಕ್ಕೆ ಪರಿಶಿಷ್ಟ ಜಾತಿಯ ಪ್ರಾತಿನಿಧ್ಯವನ್ನು ನೀಡಲಾಗಿತ್ತು. ಈ ಬಾರಿ ಇದನ್ನು ಒಂದೇ ಒಂದು ಪರಿಶಿಷ್ಟ ಜಾತಿ ಮನೆಯಿರುವ ಮಲ್ಲಾಪುರಕ್ಕೆ ನೀಡಲಾಗಿದೆ. ಅದೇ ರೀತಿ ಕಳೆದ ಬಾರಿ ಪರಿಶಿಷ್ಟ ವರ್ಗದವರೇ ಇಲ್ಲದ ಕಲ್ಲಾಜಿನಾಳಕ್ಕೆ ಪರಿಶಿಷ್ಟವರ್ಗದ ಪ್ರಾತಿನಿಧ್ಯತೆ ನೀಡಲಾಗಿತ್ತು.

ಮಂಡಲ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದಾಗ ಪಂಚಾಯಿತಿಗೆ ಫಲಾನುಭವಿಗಳನ್ನು ಗುರುತಿಸುವ ಹಾಗೂ ಹಕ್ಕು ಪತ್ರಗಳನ್ನು ನೀಡುವ ಅಧಿಕಾರವನ್ನು ನೀಡಲಾಗಿತ್ತು. ಈಗ ಗ್ರಾಮ ಪಂಚಾಯಿತಿಗಳಿಗೆ ಈ ಅಧಿಕಾರ ಇಲ್ಲ. ಇದರಿಂದಾಗಿ ಫಲಾನುಭವಿಗಳು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಮೊರೆಹೋಗಬೇಕಾಗಿದೆ ಎಂದು ಹೇಳಿದ ಜಗದೀಶ್ ಅವರು ಮುಂದುವರೆದು ಸದಸ್ಯರಿಗೆ ನೀಡುತ್ತಿರುವ ಸಭಾ ಶುಲ್ಕ (sitting fee) ಹೆಚ್ಚಿಸಬೇಕೆಂದು ಮನವಿ ಮಾಡಿಕೊಂಡು ಸದಸ್ಯರು ಅನೇಕ ಕಛೇರಿಗಳಿಗೆ ಭೇಟಿ ನೀಡುವ ಅಗತ್ಯವಿರುವುದರಿಂದ ಈಗ ನೀಡುತ್ತಿರುವ ಶುಲ್ಕವು ಸಾಲುತ್ತಿಲ್ಲ. ಭ್ರಷ್ಟಾಚಾರ ಹೆಚ್ಚಲು ಇದೂ ಒಂದು ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಮೀಸಲು ಸ್ಥಾನಗಳ ಆವರ್ತನ ಪ್ರಕ್ರಿಯೆಯನ್ನು ಮತ್ತೊಮ್ಮೆ ವಿಶದ ಪಡಿಸಿದ ಸಚಿವರು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಮತ್ತೊಮ್ಮೆ ಅದೇ ಕ್ಷೇತ್ರಕ್ಕೆ ನೀಡಲಾಗದು ಎಂದು ಸ್ಪಷ್ಟಪಡಿಸಿದರೂ, ಮೈದೊಳಲು ಪಂಚಾಯಿತಿಗೆ ಸಂಬಂಧಿಸಿದಂತೆ ಈ ಅಂಶವನ್ನು ಪರಿಶೀಲಿಸಲು ಕಾರ್ಯದರ್ಶಿಯವರಿಗೆ ಸೂಚನೆ ನೀಡಿದರು. ಸಭಾಶುಲ್ಕದ ಹೆಚ್ಚಳದ ಬೇಡಿಕೆಯನ್ನು ಪರಿಗಣಿಸುವುದಾಗಿ ಹೇಳಿದ ಸಚಿವರು ಭ್ರಷ್ಟಾಚಾರ ಹೆಚ್ಚಲು ಇದೂ ಒಂದು ಕಾರಣ ಎಂಬ ಅಭಿಪ್ರಾಯವನ್ನು ಅಲ್ಲಗಳೆಯುತ್ತಾ ಸಂಬಳ ಹೆಚ್ಚಿದಂತೆಲ್ಲಾ ಲಂಚದ ಪ್ರಮಾಣವೂ ಹೆಚ್ಚಬಹುದಲ್ಲವೇ ಎಂದು ನುಡಿದರು (ಮಂಡಲ ಪಂಚಾಯಿತಿಯನ್ನು ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಲಿಲ್ಲ).

ಮೀಸಲು ಸ್ಥಾನಗಳ ಸರದಿ ವಿಧಾನವನ್ನು ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಜಾಳಿಗೆ ಗ್ರಾಮದ ಸದಸ್ಯರು ಪ್ರಶ್ನಿಸಿದರು.



ಜ಼ಮ್ರುದ್ ಉನ್ನೀಸಾರವರಿಂದ ಪ್ರಶ್ನೆ

ಪ್ರಾತಿನಿಧಿಕ ಜನಸಂಖ್ಯೆ ಸಂಪೂರ್ಣವಾಗಿ ಇಲ್ಲದ ಕ್ಷೇತ್ರಗಳಿಗೂ ಮೀಸಲು ಸ್ಥಾನಗಳನ್ನು ವಿಸ್ತರಿಸಿದಾಗ ಬೇರೆ ಕ್ಷೇತ್ರದ ಸದಸ್ಯರಿಗೆ ಅವಕಾಶ ದೊರೆಯುವಂತಾಗಿ ಅವರು ಉತ್ಸಾಹದಿಂದ, ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವ ಸಾಧ್ಯತೆ ಕಡಿಮೆಯಾಗುವುದರೊಂದಿಗೆ ಸದಸ್ಯರು ಮತ್ತು ಮತದಾರರ ನಡುವಿನ ಸಂಬಂಧ ಘಾಸಿಗೊಳ್ಳುವ ಸಂಭವವಿರುತ್ತದೆ.

ಸೀಟುಗಳ ಮೀಸಲಾತಿಯನ್ನು ಕುರಿತು ಸ್ಪಷ್ಟವಾದ ಮಾರ್ಗಸೂಚಿಗಳು ಇಲ್ಲದಿರುವುದರಿಂದ ಕುಯುಕ್ತಿಗಳಿಗೆ ಅವಕಾಶವಾಗಿದೆ. ಈ ಸದಸ್ಯರ ತಾಲ್ಲೂಕಿನಲ್ಲಿ 'BCM-ಮಹಿಳೆ' ಎಂದು ಪ್ರಕಟಿಸಲಾಗಿದ್ದ ಸ್ಥಾನವು ನಂತರದಲ್ಲಿ ಸಾಮಾನ್ಯ ಸ್ಥಾನವೆಂದು ಬದಲಾಯಿಸಲಾಯಿತು ಎಂದು ದೂರಿದರು.

ನಿರ್ದಿಷ್ಟ ವರ್ಗದ ಜನಸಂಖ್ಯೆ ಇಲ್ಲದ ಕ್ಷೇತ್ರಗಳಿಗೆ ಮೀಸಲಾತಿಯನ್ನು ವಿಸ್ತರಿಸುವ ವಿಷಯದಲ್ಲಿ ಸಚಿವರು ಹಲವಾರು ಸಂದರ್ಭಗಳನ್ನು ವಿವರಿಸಿ ತಮ್ಮ ಅಭಿಪ್ರಾಯವನ್ನು ವಿಶದಪಡಿಸಿದರು. ಹಳೆ ಮೈಸೂರಿನ ಕೆಲವು ಸ್ಥಳಗಳಲ್ಲಿ ಪರಿಶಿಷ್ಟ ವರ್ಗದವರ ಜನಸಂಖ್ಯೆ ಬಹಳ ಕಡಿಮೆಯಿದೆ. ಆದ್ದರಿಂದ ಅಲ್ಲಿಗೆ ಶೇ 18 ರ ಪರಿಶಿಷ್ಟ ವರ್ಗದ ಮೀಸಲಾತಿಗೆ ಬದಲಾಗಿ ಕನಿಷ್ಠ ಒಂದು ಸ್ಥಾನವನ್ನು ಮೀಸಲಿರಿಸಲಾಗಿದೆ. ಪರಿಶಿಷ್ಟ ವರ್ಗದ ಅಭ್ಯರ್ಥಿ ಇಲ್ಲದಿದ್ದಲ್ಲಿ ಆ ಸ್ಥಾನವನ್ನು ಪರಿಶಿಷ್ಟ ಜಾತಿಗೆ ನೀಡಬಹುದಾಗಿದೆ. ಈ ಎರಡೂ ಪಂಗಡಗಳು ಇಲ್ಲದ ಸ್ಥಳಗಳು ಅಪರೂಪವಾದರೂ ಅಂತಹ ಪ್ರಸಂಗ ಬಂದಲ್ಲಿ ನಿಯಮಾವಳಿಗಳ ಬದಲಾವಣೆಗೆ ಸೂಕ್ತಕ್ರಮ ತೆಗೆದುಕೊಳ್ಳಬಹುದು ಎಂದರು.

ಕೊಪ್ಪಳ ಜಿಲ್ಲೆಯ ಹೇರೂರು ಗ್ರಾಮ ಪಂಚಾಯಿತಿಯ ಶ್ರೀ ಮಲ್ಲಿಕಾರ್ಜುನಗೌಡ ಮಾಲಿ ಪಾಟೀಲ ಅವರು, ಗ್ರಾಮ ಪಂಚಾಯಿತಿಗಳಿಗೆ ನೀಡುತ್ತಿರುವ ಒಂದು ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಾಲುವುದಿಲ್ಲ. ಏಕೆಂದರೆ ವಿದ್ಯುತ್ ವೆಚ್ಚ, ಸಿಬ್ಬಂದಿ ಸಂಬಳಗಳನ್ನು ಇದರಲ್ಲಿಯೇ ಭರಿಸಬೇಕಾಗಿದೆ ಎಂದರು.

ಇದಕ್ಕೆ ಉತ್ತರಿಸುತ್ತಾ ಸಚಿವರು, ಈ ಅನುದಾನದ ಮೊತ್ತವನ್ನು ಈಗಾಗಲೇ ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದೆ. ರಾಜ್ಯದ ಎಲ್ಲಾ 5600 ಗ್ರಾಮ ಪಂಚಾಯಿತಿಗಳಿಗೆ ನೀಡಿದ ಈ ಹೆಚ್ಚಳದಿಂದ ಸರ್ಕಾರದ ಮೇಲೆ ವರ್ಷಕ್ಕೆ 112 ಕೋಟಿ ರೂಪಾಯಿಗಳ ಅಧಿಕ ಹೊರೆ ಬಿದ್ದಿದೆ ಎಂದು ತಿಳಿಸಿದರು.

ಎನ್. ಬೆಳ್ಳತ್ತೂರು ಪಂಚಾಯಿತಿಯ (ಮೈಸೂರು ಜಿಲ್ಲೆ ) ಶ್ರೀಮತಿ ಜಮ್ರುದ್‌ಉನ್ನೀಸಾ ಉಡುಪಿ ಜಿಲ್ಲೆ ಮರವಂತೆಯ ಶ್ರೀಮತಿ ಶಾರದಾ ಕರ್ವಿ, ಮತ್ತು ಮೈಸೂರು ಜಿಲ್ಲೆ ಉದ್ಬೂರಿನ ಶ್ರೀಮತಿ ಪುಟ್ಟಮ್ಮ ಇವರುಗಳು ಗ್ರಾಮಪಂಚಾಯಿತಿಗಳಿಗೆ ಹೆಚ್ಚು ಹೆಚ್ಚು ಯೋಜನೆಗಳನ್ನು ಅನುಷ್ಠಾನಕ್ಕೆ ನೀಡಬೇಕೆಂದು ಮನವಿ ಮಾಡಿಕೊಂಡರು. ಉದ್ಬೂರಿನ ಶ್ರೀಮತಿ ಲಕ್ಷ್ಮಿ ಅವರು ಕುಡಿಯುವ ನೀರು ಮತ್ತು ಶೌಚಾಲಯ ಯೋಜನೆಗಳಿಗೆ ಆದ್ಯತೆ ನೀಡಿ ಅವುಗಳ ಅನುಷ್ಠಾನವನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಬೇಕೆಂದು ಹೇಳಿದರು.

ಈ ಸದಸ್ಯರ ಅಭಿಪ್ರಾಯದೊಂದಿಗೆ ಸಹಮತಿಸಿದ ಸಚಿವರು ಸ್ಥಳೀಯ ಮಟ್ಟದಲ್ಲಿ ಸ್ವಯಂ ಪೂರ್ಣ ಆಡಳಿತ ಘಟಕಗಳನ್ನು ನಿರ್ಮಾಣ ಮಾಡುವುದೇ ವಿಕೇಂದ್ರೀಕರಣದ ಮೂಲತತ್ವ ಎಂದು ವಿವರಿಸಿದರು. ಆದ್ದರಿಂದ ಪಂಚಾಯಿತಿಗಳು, ತಾಲ್ಲೂಕುಗಳು ಮತ್ತು ಜಿಲ್ಲೆಗಳು ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುವಂತಾದಾಗ ನಿಜವಾದ ಅರ್ಥದಲ್ಲಿ ಅಧಿಕಾರದ ವಿಕೇಂದ್ರೀಕರಣವಾಗುತ್ತದೆ. ಸ್ಥಳೀಯ ಮಟ್ಟದಲ್ಲಿ ಸಾಧನ ಸಂಪತ್ತುಗಳನ್ನು ಸಜ್ಜುಗೊಳಿಸುವುದು ಮುಖ್ಯವಾಗುತ್ತದೆ ಎಂದು ನುಡಿದ ಮಂತ್ರಿಗಳು ಹೆಚ್ಚು ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸುವ ಆಲೋಚನೆ ಸರ್ಕಾರಕ್ಕಿದೆ ಎಂದು ತಿಳಿಸಿದರು. ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ಜನತೆಗೆ ಒಂದು ದಿನಕ್ಕೆ ತಲಾ ಕನಿಷ್ಠ 55 ಲೀಟರ್‌ಗಳ ನೀರನ್ನು ಒದಗಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ತಿಳಿಸಿದ ಸಚಿವರು ಶ್ರೀಮತಿ ಲಕ್ಷ್ಮಿ ಅವರನ್ನು ಉದ್ದೇಶಿಸಿ ನೀರು ಮತ್ತು ಶೌಚಾಲಯ ಸೌಲಭ್ಯಗಳನ್ನು ಒದಗಿಸುವಲ್ಲಿ ಕೊಳವೆ ಬಾವಿ - ಕಿರುನೀರು ಸರಬರಾಜು ಯೋಜನೆ ಮತ್ತು ಪ್ರತ್ಯೇಕ ಶೌಚಾಲಯ ಅಥವಾ ಸಮುದಾಯ ಶೌಚಾಲಯ ಇವುಗಳಲ್ಲಿ ಲಕ್ಷ್ಮೀ ಅವರ ಆದ್ಯತೆಯನ್ನು ತಿಳಿಯ ಬಯಸಿದರು. ಇದಕ್ಕೆ ಉತ್ತರವಾಗಿ ಲಕ್ಷ್ಮೀ ಅವರು ಕೊಳವೆ ಬಾವಿ ಮತ್ತು ಸಮುದಾಯ ಶೌಚಾಲಯಗಳಿಗೆ ತಮ್ಮ ಆದ್ಯತೆ ನೀಡಿದರು. ಸಚಿವರು ಈ ಯೋಜನೆಗಳ ಅನುಷ್ಠಾನವನ್ನು ಲಕ್ಷ್ಮೀ ಅವರ ಗ್ರಾಮ ಪಂಚಾಯಿತಿಗೆ ವರ್ಗಾಯಿಸಬಹುದೇ ಎಂಬುದನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಂದ ತಿಳಿದುಕೊಳ್ಳಲು ಕಾರ್ಯದರ್ಶಿಗಳಿಗೆ ಸೂಚಿಸಿದರು.



ಕಳಕಳಿ ವ್ಯಕ್ತಪಡಿಸುತ್ತಿರುವ ಮಾಜಿ ಗ್ರಾ. ಪಂ. ಅಧ್ಯಕ್ಷೆ ಶ್ರೀಮತಿ ಒಲಿವಿಯಾ.

ಶಿವಮೊಗ್ಗ ಜಿಲ್ಲೆಯ ಮೈದೊಳಲು ಮಹಿಳಾ ಪಂಚಾಯಿತಿಯ ಮಾಜಿ ಸದಸ್ಯೆ ಶ್ರೀಮತಿ ಲಕ್ಷ್ಮೀ ಮೀಸಲು ಸೀಟುಗಳ ಸರದಿ ಪದ್ಧತಿಯಿಂದಾಗಿ ನಿಜವಾಗಿ ಕೆಲಸಮಾಡುವ ಆಸಕ್ತಿ-ಆಸೆ ಇರುವ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ವರ್ಧಿಸುವ ಅವಕಾಶದಿಂದ ವಂಚಿತರಾಗುತ್ತಾರೆ ಎಂದು ಹೇಳಿ ತಮ್ಮದೇ ಉದಾಹರಣೆಯನ್ನು ನೀಡಿದರು. ಈ ವರ್ಷ ತಮ್ಮ ಕ್ಷೇತ್ರದಲ್ಲಿ ಮೀಸಲು ಸ್ಥಾನ ಇಲ್ಲದಿರುವುದರಿಂದ ತಾವು ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗಲಿಲ್ಲವೆಂದು ತಿಳಿಸಿದ ಅವರು ಕಳೆದ ಬಾರಿ ಪರಿಶಿಷ್ಟ ಜಾತಿಯ ಮಹಿಳಾ ಮೀಸಲು ಕ್ಷೇತ್ರದಿಂದ ತಾವು ಆಯ್ಕೆಯಾಗಿದ್ದುದಾಗಿ ತಿಳಿಸಿದರು.

ಇದಕ್ಕೆ ಉತ್ತರವನ್ನು ಈಗಾಗಲೇ ವಿವರಿಸಿರುವುದಾಗಿ ಹೇಳಿದ ಸಚಿವರು ಮೀಸಲಾತಿಯನ್ನು ನಿರ್ದಿಷ್ಟ ಕ್ಷೇತ್ರಗಳಿಗೆ ಖಾಯಂಗೊಳಿಸುವುದು ಸಾಧ್ಯವಿಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು. ಶ್ರೀಮತಿ ಲಕ್ಷ್ಮೀ ಅವರು ಈ ಬಾರಿ ಬೇರೆ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಅಥವಾ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಬಹುದಾಗಿತ್ತು ಎಂದು ತಿಳಿಸಿದ ಅವರು ಮೀಸಲು ಅಭ್ಯರ್ಥಿಗಳು ಮತಗಳಿಗಾಗಿ ತಮ್ಮ ಜಾತಿಯವರನ್ನೇ ನೆಚ್ಚಿಕೊಳ್ಳದೆ ತಾವು ಯಾವ ಪ್ರದೇಶಕ್ಕೆ ಸೇರಿರುವರೋ ಅಲ್ಲಿ ಎಲ್ಲರ ವಿಶ್ವಾಸವನ್ನು ಗಳಿಸಬೇಕೆಂದು ಕರೆ ನೀಡಿದರು.

ಮರವಂತೆ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷೆ ಶ್ರೀಮತಿ ಒಲಿವಿಯಾ ಅವರು, ಹಳ್ಳಿಗಳ ರಾಜಕೀಯದಲ್ಲಿ ದಕ್ಷ ಮಹಿಳೆಯರಿಗೆ ಸೀಟು ದೊರಕುವುದೇ ಕಷ್ಟವಾಗಿ, ಸ್ವತಂತ್ರವಾಗಿ ಸ್ಪರ್ಧಿಸುವ ಮಹಿಳೆಯರ ವಿರುದ್ಧ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸುವ ಪರಿಪಾಠವಿದೆ ಎಂದರು. ಇದನ್ನು ಸಮರ್ಥಿಸಿದ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯಾದ ಡಾ. ಉಷಾರಾವ್ ಅವರು ಈ ಸರದಿಯ ವ್ಯವಸ್ಥೆಯಿಂದಾಗಿ ಮೂಲ ಉದ್ದೇಶಕ್ಕೆ ಧಕ್ಕೆ ಬಂದಿದೆ ಎಂದು ನುಡಿದರು. ಒಮ್ಮೆ ಆಯ್ಕೆಯಾದ ಮಹಿಳಾ ಅಭ್ಯರ್ಥಿ ಪಂಚಾಯತಿಯ ಕಾರ್ಯವೈಖರಿಯನ್ನು ತಿಳಿದುಕೊಳ್ಳುವಷ್ಟರಲ್ಲಿಯೇ ಆಕೆಯ ಅವಧಿ ಮುಗಿದು

ಹೋಗಿರುತ್ತದೆ. ಆದ್ದರಿಂದ ಮಹಿಳಾ ಸದಸ್ಯರ ಅವಧಿಯನ್ನು ವಿಸ್ತರಿಸಿದರೆ ಅವರು ಸಕ್ರಿಯರಾಗಿ ಕೆಲಸ ಮಾಡಲು ಅವಕಾಶವಾಗುತ್ತದೆ ಎಂದರು. ಸಮುದಾಯ ಶೌಚಾಲಯಗಳ ಬಗ್ಗೆಯೂ ಪ್ರಸ್ತಾಪಿಸಿದ ಅವರು ನೀರಿನ ಸೌಲಭ್ಯವಿಲ್ಲದ ಶೌಚಾಲಯಗಳು ಅನೇಕ ರೋಗಗಳಿಗೆ ಕಾರಣವಾಗಬಹುದು ಎಂದು ಎಚ್ಚರಿಸಿದರು.

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ಅಧ್ಯಯನದ ಅಂಶಗಳನ್ನು ಉದ್ಧರಿಸಿದ ಡಾ. ಪೂರ್ಣಿಮಾ ವ್ಯಾಸಲು ಅವರು ಟಿಕೆಟ್ ಹಂಚಿಕೆಯ ವಿಧಾನ ಸಂಕೀರ್ಣವಾಗಿದ್ದು ಪಕ್ಷ ರಾಜಕೀಯ ಇದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಾಮಾನ್ಯ ಸೀಟುಗಳನ್ನು ಸಾಮಾನ್ಯ ಪುರುಷ ಸೀಟುಗಳಾಗಿ ಅರ್ಥೈಸಲಾಗಿದೆ. ಇದರಿಂದಾಗಿ ಅನೇಕ ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ತಪ್ಪುತ್ತಿದೆ, ಎಂದು ಹೇಳಿದ ಅವರು ಮಹಿಳೆಯರು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಮಾನ್ಯ ಸ್ಥಾನಗಳಿಗೆ ಸ್ಪರ್ಧಿಸಬಹುದೆಂಬ ಸಚಿವರ ಸಲಹೆಯನ್ನು ವಿರೋಧಿಸಿದರು.

ಈ ವಾದದ ಬಹುತೇಕ ಅಂಶಗಳನ್ನು ಒಪ್ಪಿದ ಸಚಿವರು ಸಮಾಜದಲ್ಲಿ ರಾಜಕೀಯ ಇರುವವರೆಗೂ ಚುನಾವಣೆಗಳಲ್ಲಿ ಅದರ ಪ್ರಭಾವವನ್ನು ತಪ್ಪಿಸಲು ಸಾಧ್ಯವಿಲ್ಲ. ಆದರೂ ಸರ್ಕಾರ ಪಂಚಾಯಿತಿ ಚುನಾವಣೆಗಳನ್ನು ಪಕ್ಷರಹಿತವನ್ನಾಗಿ ಮಾಡಿರುವ ಮುಖ್ಯ ಉದ್ದೇಶ ಅಭ್ಯರ್ಥಿಗಳು ಸೀಟಿಗಾಗಿ, ಟಿಕೇಟ್‌ಗಾಗಿ ಚಿನ್ಹೆಗಳಿಗಾಗಿ ಯಾವುದೇ ಪಕ್ಷವನ್ನು ಬೇಡುವ ಪ್ರಸಂಗ ಇರಬಾರದೆಂಬುದೇ ಆಗಿದೆ. ಜೊತೆಗೆ ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಲು ಯಾವುದೇ ಅಡ್ಡಿಗಳಿರುವುದಿಲ್ಲ. ಯಾವುದೇ ಪಕ್ಷಕ್ಕೆ ಸೇರಲು ಅವಕಾಶವಿರುತ್ತದೆ. ಇಡೀ ಸಮುದಾಯ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಚುನಾವಣೆಗಳೂ ಪಕ್ಷರಹಿತವಾಗಿರಬೇಕೆಂದು ಒಪ್ಪಿಕೊಂಡರೆ ಸರ್ಕಾರವು ಅದಕ್ಕೆ ಸಿದ್ಧವಾಗಿಯೇ ಇದೆ. ಆದರೆ ಪ್ರಜಾಪ್ರಭುತ್ವದಲ್ಲಿ ಇದು ಕಷ್ಟ ಸಾಧ್ಯವಾದುದು. ಏಕೆಂದರೆ ಜನರು ತಮ್ಮನ್ನು ಒಂದಲ್ಲ ಒಂದು ರಾಜಕೀಯ ಪಕ್ಷಕ್ಕೆ ಸೇರಿದವರೆಂದು ಗುರುತಿಸಿಕೊಳ್ಳುತ್ತಾರೆ ಎಂದರು.

ಮೈಸೂರು ಜಿಲ್ಲೆಯ ಉದ್ಬೂರು ಗ್ರಾಮ ಪಂಚಾಯತಿಯ ಶ್ರೀ ಜವರಪ್ಪ ನಾಯಕರು ಸಚಿವರೊಂದಿಗೆ ಹಂಚಿಕೊಂಡ ಅನುಭವ ಬೇರೆಯೇ ಆಗಿತ್ತು. ವಿರೋಧ ಪಕ್ಷಗಳು ಸರ್ಕಾರಿ ಅಧಿಕಾರಿ ವರ್ಗದೊಂದಿಗೆ ಕೈ ಜೋಡಿಸಿ ಶೌಚಾಲಯ ನಿಯಮವನ್ನು ಮುಂದೊಡ್ಡಿ ತಮ್ಮನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ನಿರುತ್ಸಾಹಗೊಳಿಸಿದುದು ಮಾತ್ರವಲ್ಲದೆ, ಕೆಲವು ಪಕ್ಷಗಳ ಸದಸ್ಯರು ಮತ್ತು ಪಂಚಾಯಿತಿ ಕಾರ್ಯದರ್ಶಿಗಳ ಕುಯುಕ್ತಿಯಿಂದ ತಾವು ತಮ್ಮ ನಾಮ ಪತ್ರವನ್ನು ಸಲ್ಲಿಸಲು ಸಹಾ ಅವಕಾಶ ದೊರೆಯಲಿಲ್ಲ ಎಂದು ದೂರಿದರು.

ಶ್ರೀ ನಾಯಕ ಅವರ ಹೇಳಿಕೆಯನ್ನು ಸಮರ್ಥಿಸಿದ ಅದೇ ಪಂಚಾಯತಿಯ ಶ್ರೀ ಮಹದೇವ ಸ್ವಾಮಿ ಅವರು ತಮ್ಮ ಕ್ಷೇತ್ರದಲ್ಲಿ ಆರು ಜನ ಉಮೇದುವಾರರು ಅವಿರೋಧವಾಗಿ ಆಯ್ಕೆಯಾಗಲು ಮುಖ್ಯ ಕಾರಣ ಪಂಚಾಯತಿಯ ಮಾಜಿ ಅಧ್ಯಕ್ಷರು ಚುನಾವಣಾಧಿಕಾರಿಯ ಸಹಾಯದಿಂದ ಇತರ ಯಾವ ನಾಮಪತ್ರವೂ ಸಲ್ಲಿಕೆಯಾಗಲು ಅವಕಾಶ ನೀಡದಿದ್ದದ್ದು ಎಂದು ಸಚಿವರಿಗೆ ಹೇಳಿದರು.



ತಮ್ಮ ದೂರನ್ನು ಮುಂದುಡುತ್ತಿರುವ
ಜವರಪ್ಪ ನಾಯಕ

ಇದು ಚುನಾವಣಾ ವಿವಾದವಾಗಿರುವುದರಿಂದ ಚುನಾವಣಾ ಆಯೋಗಕ್ಕೆ ದೂರು ನೀಡಲು ಸಲಹೆ ನೀಡಿದ ಸಚಿವರು ಈ ವಿವಾದದ ಪೂರ್ಣ ವಿವರಗಳನ್ನು ತೆಗೆದುಕೊಳ್ಳುವಂತೆ ಕಾರ್ಯದರ್ಶಿಗಳಿಗೆ ತಿಳಿಸಿದರು.

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ತಂಡವನ್ನು ಅಭಿನಂದಿಸಿದ ಡಾ|| ಶಿವಣ್ಣ ಅವರು ಅಧ್ಯಯನದ ಕೆಲವು ಮುಖ್ಯ ಅಂಶಗಳನ್ನು ವಿವರಿಸಿದರು.

ಮೀಸಲು ಸ್ಥಾನಗಳ ಅಧಿಕಾರಾವಧಿಯನ್ನು ವಿಸ್ತರಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಡಾ|| ಶಿವಣ್ಣ ಅವರು ಕರ್ನಾಟಕದಲ್ಲಿನ ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ಥಿತಿಯನ್ನು ಇತರ ರಾಜ್ಯಗಳ ಪಂಚಾಯಿತಿಗಳೊಂದಿಗೆ ಹೋಲಿಸಿದರು. ತಮಿಳುನಾಡು ಮತ್ತು ರಾಜಾಸ್ಥಾನ ಸರ್ಕಾರಗಳು ಪಂಚಾಯಿತಿಗಳ ಆದಾಯ ಸಂಗ್ರಹಕ್ಕೆ ಸಮನಾದ ಅನುದಾನಗಳನ್ನು ನೀಡುತ್ತಿವೆ. ಕರ್ನಾಟಕ ಸರ್ಕಾರವೂ ಸಹ ಈ ವಿಧಾನವನ್ನು ಅನುಸರಿಸಿದರೆ ಗ್ರಾಮ ಪಂಚಾಯಿತಿಗಳಿಗೆ ಸಹಾಯವಾಗುವುದು ಮಾತ್ರವಲ್ಲ - ಪಂಚಾಯಿತಿಗಳು ತಮ್ಮ ಆದಾಯವನ್ನು ಗಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುತ್ತವೆ ಎಂದರು.

ಮುಂದುವರೆದು ಡಾ|| ಶಿವಣ್ಣ ಅವರು ಗ್ರಾಮಸಭೆಗಳು ಜನತೆಗೆ ಮಾಹಿತಿ ಒದಗಿಸುವ ಕ್ಷೇತ್ರಗಳಾಗಬೇಕು. ಗ್ರಾಮ ಪಂಚಾಯತಿಯ ಸದಸ್ಯರು ಗ್ರಾಮಸಭೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ನೆರೆಯುವಂತೆ ಮಾಡುವ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಕೇಳಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸುತ್ತಾ ಸಚಿವರು ಗ್ರಾಮಸಭೆಗಳ ಮಹತ್ವವನ್ನು ಒತ್ತಿಹೇಳಿ ಕಾಯಿದೆಯ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಸಭೆಗಳು ಸೇರಬೇಕೆಂಬ ನಿಯಮವಿದ್ದರೂ ಇದು ಆಗುತ್ತಿಲ್ಲವೆಂಬ ದೂರುಗಳು ಇವೆ. ಸರ್ಕಾರ ಈಗಾಗಲೇ ಎಲ್ಲಾ ಮುಖ್ಯ

ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮ ಸಭೆಗಳು ನಡೆಯಬೇಕಾದ ದಿನಾಂಕವನ್ನು ಗೊತ್ತು ಮಾಡಿ ಗ್ರಾಮಸ್ಥರೆಲ್ಲರೂ ಸಭೆಯಲ್ಲಿ ಪಾಲ್ಗೊಳ್ಳಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ಸುತ್ತೋಲೆಯನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು.

ಸಮಾನ ಅನುದಾನದ ಬಗ್ಗೆ ಮಾತನಾಡುತ್ತಾ ಸಚಿವರು ಈ ವ್ಯವಸ್ಥೆ 1959 ರಿಂದಲೂ ಇತ್ತು. ಆಗ ಶಾಲಾ ಕಟ್ಟಡಗಳನ್ನು, ರಸ್ತೆಗಳನ್ನು ಈ ಅನುದಾನದ ಮೂಲಕ ನಿರ್ಮಿಸಲಾಗುತ್ತಿತ್ತು. ನಂತರ ಈ ವ್ಯವಸ್ಥೆ ಮಾಯವಾಯಿತು. ಈ ವ್ಯವಸ್ಥೆಯ ಪುನರ್ಜನ್ಮಕ್ಕೆ ಪಂಚಾಯಿತಿಗಳಿಂದ ಬೇಡಿಕೆ ಬಂದಲ್ಲಿ, ತಮಗೂ ಈ ವ್ಯವಸ್ಥೆಯಲ್ಲಿ ಆಸ್ಥೆ ಇರುವುದರಿಂದ, ಮತ್ತೆ ಈ ವಿಧಾನವನ್ನು ಜಾರಿಗೆ ತರಬಹುದು ಎಂದು ನುಡಿದರು.

ಹೆಚ್ಚಿನಾಂಶ ಸದಸ್ಯರ ಅಭಿಪ್ರಾಯದಂತೆ ಸೀಟುಗಳ ಸರದಿಯ ಅವಧಿಯನ್ನು ಹತ್ತು ವರ್ಷಗಳಿಗೆ ಹೆಚ್ಚಿಸಬೇಕಾದರೆ ಸಂವಿಧಾನ ತಿದ್ದುಪಡಿಯ ಅಗತ್ಯವಿದೆ ಎಂದು ಸಚಿವರು ನುಡಿದರು.

ಡಾ।। ವಿಜಯಲಕ್ಷ್ಮಿ ಅವರು ಸಂಸ್ಥೆಯ ಅಧ್ಯಯನದಲ್ಲಿ ಕಂಡುಬಂದ, ಸದಸ್ಯರುಗಳ ಅವಿರೋಧ - ಸರ್ವಾನುಮತ ಆಯ್ಕೆಯ ಸಂಖ್ಯಾಹೆಚ್ಚಳ ಜನಮತಕ್ಕಿಂತಲೂ ಹೆಚ್ಚಾಗಿ ಗಣ್ಯರ, ಸ್ವಾರ್ಥ ಸಾಧಕರ ಹಿಡಿತವನ್ನು ಪ್ರತಿಬಿಂಬಿಸುತ್ತದೆ ಎಂಬ ಅಂಶದೆಡೆಗೆ ಸಚಿವರ ಗಮನವನ್ನು ಸೆಳೆದು ಅವರ ಪ್ರತಿಕ್ರಿಯೆಯನ್ನು ಬಯಸಿದರು.

ಶ್ರೀಮತಿ ಸಂಧ್ಯಾರಾವ್ ಅವರು ಮಳವಳ್ಳಿ ತಾಲ್ಲೂಕಿನಲ್ಲಿ ಕೆಲವು ಗ್ರಾಮ ಪಂಚಾಯಿತಿ ಸೀಟುಗಳನ್ನು ಹರಾಜು ಹಾಕಲಾಯಿತೆಂಬ ವರದಿಯನ್ನು ಸಚಿವರ ಗಮನಕ್ಕೆ ತಂದು, ಇದೂ ಅಲ್ಲದೆ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಸರ್ವಾನುಮತದಿಂದ ಆಯ್ಕೆಯಾದ ಪಂಚಾಯಿತಿಗಳಿಗೆ ಸರ್ಕಾರವು ಒಂದು ಲಕ್ಷ ರೂಪಾಯಿಗಳ ಉತ್ತೇಜಕ ಧನವನ್ನು ನೀಡುತ್ತದೆ ಎಂದು ಹೇಳಿ ತಪ್ಪು ಅಭಿಪ್ರಾಯವನ್ನು ಮೂಡಿಸಲಾಗಿದೆ ಎಂದು ಹೇಳಿದರು.

ಈ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುತ್ತಾ ಸಚಿವರು ಒಂದು ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನದ ವಿಷಯ ತಪ್ಪು ಮಾಹಿತಿಯಾಗಿದೆ ಎಂದು ಹೇಳಿ ಪ್ರಜಾಪ್ರಭುತ್ವದ ಮುಖ್ಯ ಉದ್ದೇಶವೇ ಒಮ್ಮತದ ಸಾಧನೆ. ಇದು ಸಾಧ್ಯವಿಲ್ಲದಾದಾಗ ಮಾತ್ರ ಚುನಾವಣೆಗಳ ಅಗತ್ಯ ಬೀಳುತ್ತದೆ. ಆದ್ದರಿಂದ ಚುನಾವಣೆ ನಡೆದರೆ ಮಾತ್ರ ಅದು ಪ್ರಜಾಪ್ರಭುತ್ವ ಎಂದು ಹೇಳಲಾಗುವುದಿಲ್ಲ. ಜನರ ರಾಜಕೀಯ ಪ್ರಜ್ಞೆ ಬೆಳೆದಾಗ, ಕ್ರಿಯಾಶೀಲರಾದಾಗ ಹೆಚ್ಚಿನ ಜನ ಅವಿರೋಧವಾಗಿ, ಸರ್ವಾನುಮತದಿಂದ ಆಯ್ಕೆಯಾಗುವ ಸಂಭವಗಳು ಕಡಿಮೆಯಾಗುತ್ತದೆ ಎಂದು ವಿವರಿಸಿದ ಸಚಿವರು ಮಳವಳ್ಳಿ ತಾಲ್ಲೂಕಿನಲ್ಲಿ ನಡೆದ ಪ್ರಸಂಗವು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂತಹ ಘಟನೆಯಾದರೂ ಇದರ ವಿಚಾರಣೆ ನಡೆಸುವುದು ಕಷ್ಟ ಎಂದು ಹೇಳಿದರು.

ಸಭಾಧ್ಯಕ್ಷರಾದ ಡಾ।। ಕೆ.ಎಸ್. ಕೃಷ್ಣಸ್ವಾಮಿ ಅವರು ತಮ್ಮ ಸಮಾರೋಪ ಭಾಷಣದಲ್ಲಿ ಅನೇಕ ಅಂಶಗಳನ್ನು ಪ್ರಸ್ತಾಪಿಸಿದರು. ಇತ್ತೀಚಿನ ಗ್ರಾಮಪಂಚಾಯಿತಿ ಚುನಾವಣೆಗಳ ಬಗ್ಗೆ

